सत्यमेव जयते

**Ministry of Corporate Affairs**
**Government of India**

# ಕೇಪಿಟಲ್ ಮಾರ್ಕೆಟ್ ಹೂಡಿಕೆದಾರರಿಗೆ ಸಂಕ್ಷಿಪ್ತ ಮಾರ್ಗದರ್ಶಿ ಕೈಪಿಡಿ

ಸಂಪಾದಕರು
**ಪೃಥ್ವಿ ಹಾಲ್ಡ್ಯ**
ಪ್ರೈಮ್ ಡಾಟಾಬೇಸ್

**ಸಹಾಯ**

**ಹೂಡಿಕೆದಾರರ ಜಾಗೃತಿ ಮತ್ತು ಸುರಕ್ಷಾ ನಿಧಿ**
ಜೂನ್ 2010



**ಸಲ್ಮಾನ್ ಖುರ್ಷಿದ್**

ಮಿನಿಸ್ಟರ್ ಆಫ್ ಸ್ಟೇಟ್ (ಸ್ವತಂತ್ರ ಹೊಣೆಗಾರಿಕೆ)

ಕಾರ್ಪರೇಟ್ ವ್ಯವಹಾರ ಸಚಿವಾಲಯ, ಭಾರತ ಸರಕಾರ

"ಕಾರ್ಪರೇಟ್ ವ್ಯವಹಾರ ಸಚಿವಾಲಯವು ಈ ಆರ್ಥಿಕ ವರ್ಷ ಹೂಡಿಕೆದಾರರಿಗೆ ಜಾಗೃತಿ ಮೂಡಿಸುವ ಕಾರ್ಯಕ್ರಮವನ್ನು ರಾಷ್ಟ್ರೀಯ ಅಜೆಂಡ ಆಗಿ ಕೈಗೆತ್ತಿಕೊಂಡಿದೆ. ಈ ಅಗತ್ಯಕ್ಕಾಗಿ ಅನೇಕ ಸಂಸ್ಥೆಗಳೊಂದಿಗೆ ನಾವು ಕೈಜೋಡಿಸಿದ್ದೇವೆ. ಈ ಆರ್ಥಿಕ ವರ್ಷದಲ್ಲಿ ದೇಶದಾದ್ಯಂತ 3000 ಕ್ಕೂ ಹೆಚ್ಚು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ತೀರ್ಮಾನಿಸಲಾಗಿದೆ. 'ಜಾಗೃತ ಹೂಡಿಕೆದಾರ–ಕಾರ್ಪರೇಟ್ ದೇಶದ ಸಂಪತ್ತು' ಎಂಬ ಧ್ಯೇಯವಾಕ್ಯದೊಂದಿಗೆ 2010 ಜುಲೈ ತಿಂಗಳಿನಲ್ಲಿ 'ಭಾರತೀಯ ಹೂಡಿಕೆದಾರರ ವಾರಾಚರಣೆ' ಕಾರ್ಯಕ್ರಮ ಹಮ್ಮಿಕೊಳ್ಳಲು ತೀರ್ಮಾನಿಸಲಾಗಿದೆ. ಈ ಸಂದರ್ಭದಲ್ಲಿ ಸಚಿವಾಲಯವು ಈ ರಂಗದಲ್ಲಿ ಆಸಕ್ತಿ ಇರುವ ಜನಸಾಮಾನ್ಯರಿಗೆ ತಿಳುವಳಿಕೆ ಮೂಡಿಸಲು ಕಿರು ಪುಸ್ತಕವೊಂದನ್ನು ಪ್ರಟಕಟಿಸಲು ನಿರ್ಧರಿಸಿದೆ. ಇದರಲ್ಲಿ ಹಕ್ಕುಗಳು, ಜವಾಬ್ದಾರಿಗಳು, ವಿವಿಧ ಹೂಡಿಕೆ ಅವಕಾಶಗಳು, ಲಾಭಗಳು, ಅವುಗಳಲ್ಲಿ ಹುದುಗಿರುವ ಕಷ್ಟನಷ್ಟಗಳು ಇವೆಲ್ಲವನ್ನೂ ವಿವರಿಸಲಾಗಿದೆ. ಜನರಲ್ಲಿ ಜಾಗೃತಿ ಮೂಡಿಸುವಲ್ಲಿ ಇದೊಂದು ಮಹತ್ವದ ಹೆಜ್ಜೆ ಎಂದು ನನಗೆ ಭರವಸೆ ಇದೆ. ಜನಸಾಮಾನ್ಯರನ್ನು ದೇಶದ ಕಾರ್ಪರೇಟ್ ಹಣಕಾಸು ವ್ಯವಸ್ಥೆಯಲ್ಲಿ ಸೇರಿಸಲು ಇದು ಸಹಾಯಕವಾಗಲಿದೆ"

---



**ಆರ್. ಭಂಡೋಪಧ್ಯಾಯ**

ಕಾರ್ಯದರ್ಶಿ

ಕಾರ್ಪರೇಟ್ ವ್ಯವಹಾರ ಸಚಿವಾಲಯ, ಭಾರತ ಸರಕಾರ

"ಹೂಡಿಕೆದಾರರ ಜಾಗೃತಿ ಮತ್ತು ಮಾಹಿತಿ ಕಾರ್ಯಕ್ರಮವನ್ನು ಕಾರ್ಪರೇಟ್ ವ್ಯವಹಾರಗಳ ಸಚಿವಾಲಯವು ಬಹಳ ವಿಸ್ತಾರವಾಗಿ ಜಾರಿಗೆ ತರಲು ತೀರ್ಮಾನಿಸಿದೆ. ಈ ಹಿನ್ನೆಲೆಯಲ್ಲಿ ಅನೇಕ ಸಂಘ ಸಂಸ್ಥೆಗಳೊಂದಿಗೆ ಕೈ ಜೋಡಿಸಲಾಗಿದೆ. ಹೂಡಿಕೆದಾರರಿಗೆ ಸರಳವಾಗಿ ಅರ್ಥವಾಗುವಂತೆ ಮಾಹಿತಿ ನೀಡಲು ಪುಸ್ತಕ ಪ್ರಕಟಿಸಲು ತೀರ್ಮಾನಿಸಲಾಗಿದೆ. ಈ ಪುಸ್ತಕದಲ್ಲಿ ಹೂಡಿಕೆಯ ಅನೇಕ ಅವಕಾಶಗಳು, ಹೂಡಿಕೆದಾರರ ಹಕ್ಕುಗಳು, ಕರ್ತವ್ಯಗಳು ಸೇರಿದಂತೆ ಅನೇಕ ವಿಚಾರಗಳನ್ನು ಅಳವಡಿಸಲಾಗಿದೆ. ಈ ಪುಸ್ತಕದಿಂದ ಜನಸಾಮಾನ್ಯರು ಕಾರ್ಪರೇಟ್ ಹಣಕಾಸು ವ್ಯವಸ್ಥೆಗೆ ಆಕರ್ಷಿತರಾಗುವರು. ದೇಶದ ಸರ್ವಾಂಗೀಣ ಅಭಿವೃದ್ಧಿಗೆ ಕಾರ್ಪರೇಟ್ ವ್ಯವಹಾರಗಳ ಸಚಿವಾಲಯದ ಕಿರು ಕಾಣಿಕೆ ಇದಾಗಿದೆ. ಇದು ಹೂಡಿಕೆದಾರರಿಗೆ ಹಾಗೂ ಈ ಕ್ಷೇತ್ರದಲ್ಲಿ ಆಸಕ್ತಿ ಇರುವವರಿಗೆ ಈ ಪುಸ್ತಕದಿಂದ ಬಹಳ ಉಪಕಾರ ಸಿಗಲಿದೆ. ಈ ವಿಷಯದಲ್ಲಿ ತಜ್ಞರಾಗಿರುವ ಶ್ರೀ ಪೃಥ್ವಿ ಹಾಲ್‌ಡ್ಯ ಇದನ್ನು ಸಂಪಾದಿಸಿದ್ದಾರೆ."

# ಹೂಡಿಕೆದಾರರ ಜಾಗೃತಿ ಮತ್ತು ಸುರಕ್ಷಾ ನಿಧಿ

ಹೂಡಿಕೆದಾರರ ಜಾಗೃತಿ ಮತ್ತು ಸುರಕ್ಷಾ ನಿಧಿ (ಐಇಪಿಎಫ್) ಇದನ್ನು ಕಂಪೆನಿ ಕಾಯಿದೆ, 1956 ಯ ಅನುಸಾರ ಅನುಷ್ಠಾನಕ್ಕೆ ತರಲಾಗಿದೆ. ಹೂಡಿಕೆದಾರರಿಗೆ ಹೆಚ್ಚಿನ ಮಾಹಿತಿ ಒದಗಿಸುವುದು ಮತ್ತು ಅವರ ಹಿತಾಸಕ್ತಿಗಳನ್ನು ಸಂರಕ್ಷಿಸುವುದು ಇದರ ಉದ್ದೇಶವಾಗಿದೆ.

ಐಇಪಿಎಫ್‌ನ ಆಶ್ರಯದಲ್ಲಿ ಹೂಡಿಕೆದಾರಿಗೆ ವಿಚಾರ ವಿನಿಮಯ ಕಾರ್ಯಕ್ರಮ, ಜಾಗೃತಿ ಕಾರ್ಯಕ್ರಮ ಮೊದಲಾದವುಗಳನ್ನು ಹಮ್ಮಿಕೊಳ್ಳಲಾಗುವುದು. ಇದಕ್ಕಾಗಿ ವಿಚಾರ ಸಂಕಿರಣ, ಬಹುಮಾಧ್ಯಮ ಜಾಗೃತಿ ಕಾರ್ಯಕ್ರಮ ಮತ್ತು ಇಂತಹ ಉದ್ದೇಶದ ಯೋಜನೆಗಳಿಗೆ ಆರ್ಥಿಕ ಸಹಾಯ ನೀಡುವುದು ಒಳಗೊಂಡಿದೆ. ಇದಕ್ಕೆ ಅಂಜರ್ತಾಲದಲ್ಲಿ ಮೂರು ವೆಬ್‌ಸೈಟ್‌ಗಳನ್ನು ಆರಂಭಿಸಲಾಗಿದೆ.

## ಹೂಡಿಕೆದಾರರಿಗೆ ಮಾಹಿತಿ ನೀಡುವ ವೆಬ್‌ಸೈಟ್‌ಗಳು

### ಐಇಪಿಎಫ್.ಜಿಒವಿ.ಐಎನ್ (iepf.gov.in)

ಈ ವೆಬ್‌ಸೈಟ್ ಸಣ್ಣ ಪ್ರಮಾಣದ ಹೂಡಿಕೆದಾರರಿಗೆ ಬೇಕಾದ ಮಾಹಿತಿ ಸಂಪನ್ಮೂಲಗಳನ್ನು ಒಳಗೊಂಡಿದೆ. ಇದರದಲ್ಲಿ ಕೇಪಿಟಲ್ ಮಾರ್ಕೆಟ್‌ನ ಎಲ್ಲಾ ವಿಚಾರಗಳನ್ನು ಅವರಿಗೆ ಅರ್ಥವಾಗುವ ಭಾಷೆಯಲ್ಲಿ ತಿಳಿಯ ಪಡಿಸಲಾಗುವುದು.

ಈ ವೆಬ್‌ಸೈಟ್‌ನಲ್ಲಿ ಪ್ರಸ್ತುತ ಐಪಿಒ ಹೂಡಿಕೆ, ಮ್ಯೂಚ್ಯುವಲ್ ಫಂಡ್ ಹೂಡಿಕೆ, ಸ್ಟೋಕ್ ಟ್ರೇಡಿಂಗ್, ಡಿಪೋಸಿಟರಿ ಅಕೌಂಟ್, ಡೆಪ್ತ್ ಮಾರ್ಕೆಟ್, ಡೆರಿವೇಟಿವ್ಸ್, ಇಂಡೈಸೆಸ್, ಇಂಡೆಕ್ಸ್ ಫಂಡ್ಸ್, ಹೂಡಿಕೆದಾರರ ಸಮಸ್ಯೆ ಹಾಗೂ ತರ್ಕ ಪರಿಹಾರ(ಸ್ಟೋಕ್ ಎಕ್ಸೆಂಜ್) ಹೂಡಿಕೆದಾರರ ಹಕ್ಕುಗಳು ಮತ್ತು ಕರ್ತವ್ಯಗಳು, ಸಲ್ಲುವ ಮತ್ತು ಸಲ್ಲದ ವಿಚಾರಗಳನ್ನು ಒಳಗೊಂಡಿದೆ.

ಈ ವೆಬ್‌ಸೈಟ್ ಇಂಗ್ಲಿಷ್ ಮತ್ತು ಹಿಂದಿ ಭಾಷೆಯ ಹೊರತಾಗಿ 12 ಪ್ರಾದೇಶಿಕ ಭಾಷೆಗಳಲ್ಲಿ ಲಭ್ಯವಿದೆ.

### ವಾಚ್‌ಔಟ್‌ಇನ್‌ವೆಸ್ಟರ್ಸ್.ಕಾಂ (Watchoutinvestors.com)

ಎಲ್ಲಾ ಮೋಸ ವಂಚನೆಗಳಿಂದ ಪಾರಾಗಲು ಸ್ವಯಂ ರಕ್ಷಣೆಗಿಂತ ಬೇರೆ ಮಾರ್ಗವಿಲ್ಲ. ಇಂತಹ ವಿಚಾರಗಳಿರುವ ವೆಬ್‌ಸೈಟ್ ಜಗತ್ತಿನಲ್ಲಿಯೇ ಮೊದಲಬಾರಿಯಾಗಿದೆ. ಇದು ಹೂಡಿಕೆದಾರರನ್ನು ಮೋಸಮಾಡುವ ಕಂಪೆನಿಗಳಿಂದ, ಪ್ರತಿಕ್ರಿಯೆ ಮಾಡದ ಕಂಪೆನಿಗಳಿಂದ, ಮದ್ಯವರ್ತಿಗಳಿಂದ, ವ್ಯಕ್ತಿಗಳಿಂದ ಪಾರಾಗಲು ಸಲಹೆ ನೀಡುತ್ತದೆ. ಇದರಲ್ಲಿ ಇಂತಹ ವಿಚಾರಗಳ ರಾಷ್ಟ್ರಮಟ್ಟದ ದಾಖಲೆಗಳಿವೆ.

ವಾಚ್‌ಔಟ್‌ಇನ್‌ವೆಸ್ಟರ್ಸ್.ಕಾಂನಲ್ಲಿ ಹೂಡಿಕೆದಾರರಿಗೆ ಅವರ ಅಭಿರುಚಿಗನುಗುಣವಾದ ಅವಕಾಶಗಳ ಬಗ್ಗೆ ಸರಳವಾಗಿ ಶೀಘ್ರವಾಗಿ, ಕಾರ್ಯದಕ್ಷತೆಯೊಂದಿಗೆ ಹುಡುಕಾಡಲು ವ್ಯವಸ್ಥೆಮಾಡಲಾಗಿದೆ. ಹೂಡಿಕೆಯ ಮಾರ್ಗದಲ್ಲಿ ದಾರಿತಪ್ಪಿಸುವ ವಿಚಾರಗಳ ಬಗ್ಗೆ ಪೂರ್ವಭಾವಿ ಅರಿವು ನೀಡಿ ಅತ್ಯುತ್ತಮ ಹೂಡಿಕೆ ಅವಕಾಶಗಳ ಬಗ್ಗೆ ಶಿಫಾರಸು ನೀಡಲಾಗುತ್ತದೆ.

2010 ಮೇ 31 ರ ಸುಮಾರಿಗೆ ವಂಚನೆಗಳ, ತಪ್ಪಿತಸ್ಥರ 1,06,000 ಮಾಹಿತಿಗಳನ್ನು ಕಲೆ ಹಾಕಲಾಗಿದೆ. ಇದು ಬಿಎಸ್‌ಇ, ಸಿಡಿಎಸೆಲ್, ಸಿಎಲ್‌ಬಿ, ಡಿಆರ್‌ಟಿ, ಇಪಿಎಫ್‌ಒ, ಐಆರ್‌ಡಿಎ, ಎಂಸಿಎ, ಎನ್‌ಎಚ್‌ಬಿ, ಎನ್‌ಎಸ್‌ಡಿಎಲ್, ಎನ್‌ಎಸ್‌ಇ, ಆರ್‌ಬಿಐ, ಆರ್‌ಒಸಿ ಮತ್ತು ಸೆಬಿ ಇವುಗಳ ಆದೇಶದ ಅನ್ವಯ ಈ ಮಾಹಿತಿ ಕಲೆ ಹಾಕಲಾಗಿದೆ.

ವಾಚ್‌ಔಟ್‌ಇನ್‌ವೆಸ್ಟರ್ಸ್.ಕಾಂ ವೆಬ್‌ಸೈಟನ್ನು 2010 ಮೇ 31ರ ಸುಮಾರಿಗೆ 27 ಲಕ್ಷ ಮಂದಿ ವೀಕ್ಷಿಸಿದ್ದಾರೆ.

### ಇನ್‌ವೆಸ್ಟರ್‌ಹೆಲ್ಪ್‌ಲೈನ್.ಇನ್ (Investorhelpline.in)

ಹೂಡಿಕೆದಾರರ ಸಮಸ್ಯೆಗಳಿಗೆ ಒಂದೇ ಸೂರಿನಡಿಯಲ್ಲಿ ಉಚಿತವಾಗಿ ಪರಿಹಾರ ಒದಗಿಸುವ ಅಂತರ್ಜಾಲ ಕಿಂಡಿ ಇದಾಗಿದೆ. ಕಂಪೆನಿ ವ್ಯವಹಾರ ಸಚಿವಾಲಯ, ಕಂಪೆನಿ ನೊಂದಣಾಧಿಕಾರಿ, ಸೆಕ್ಯುರಿಟೀಸ್ ಎಂಡ್ ಎಕ್ಸ್‌ಚೆಂಜ್ ಬೋರ್ಡ್ ಆಫ್ ಇಂಡಿಯಾ, ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ ಇವುಗಳನ್ನು ಒಳಗೊಂಡಿದೆ. ಅಹವಾಲುಗಳನ್ನು ಸ್ವೀಕರಿಸಿ ಕಂಪೆನಿಯೊಂದಿಗೂ, ಸಂಬಂಧಪಟ್ಟ ನಿಯಂತ್ರಕ ರೊಂದಿಗೂ ಪರಾಮರ್ಶಿಸಿ ಪರಿಹಾರ ಒದಗಿಸಲಾಗುವುದು.

ಹೂಡಿಕೆದಾರರು ವೆಬ್‌ಸೈಟ್‌ನಲ್ಲಿ ಕೆಪಿಟಲ್ ಮಾರ್ಕೆಟ್ ಮತ್ತು ಕಂಪೆನಿ ಡೆಪೋಸಿಟ್ ಬಗೆಗಿನ ತಮ್ಮ ಅಹವಾಲುಗಳನ್ನು ಲಾಗ್ ಇನ್ ಮಾಡಬಹುದು. ಇದಕ್ಕಾಗಿ ಸರಳವಾದ ಫಾರ್ಮ್‌ಗಳಿವೆ. ವಿಚಾರಣೆಯ ಪ್ರಗತಿಯನ್ನು ಕೂಡಾ ವೀಕ್ಷಿಸಬಹುದಾಗಿದೆ.

ತುಂಬಾ ಹೂಡಿಕೆದಾರರು ಈ ಸೌಲಭ್ಯಗಳನ್ನು ಬಳಸುತ್ತಿದ್ದಾರೆ.

**ವಿವೇಕದಿಂದ ಹಣ ಸಂಗ್ರಹ ಮಾಡಿರಿ**

**ಬುದ್ಧಿವಂತಿಕೆಯೊಂದಿಗೆ ಹೂಡಿಕೆ ಮಾಡಿರಿ**

**ಹೂಡಿಕೆ ಮಾಡುವುದು**

- ಕಡ್ಡಾಯವಾಗಿ ಹೂಡಿಕೆ ಮಾಡಲೇಬೇಕು
- ನೀವು ಹೂಡಿಕೆ ಮಾಡದಿದ್ದರೆ ನಿಮ್ಮ ಹಣದ ಮೌಲ್ಯದಲ್ಲಿ/ಪಡಕೊಳ್ಳುವ ಸಾಮರ್ಥ್ಯದಲ್ಲಿ ಕಡಿಮೆಯಾಗುತ್ತಾ ಸಾಗುತ್ತದೆ.
- ಆದರೆ, ಯಾವುದೇ ವಿವೇಚನೆ ಇಲ್ಲದೆ ಹೂಡಿಕೆ ಮಾಡುವುದು ಕೂಡಾ ಸಂಪತ್ತಿಗೆ ತೊಂದರೆ ಉಂಟುಮಾಡುತ್ತದೆ.

**ಬುದ್ಧಿವಂತ ಹೂಡಿಕೆಗೆ 20 ಸೂತ್ರಗಳು**

**ಸೂತ್ರ 1**

**ಮೂಲಭೂತವಾಗಿ ಭದ್ರವಾಗಿರುವ ಕಂಪೆನಿಗಳಲ್ಲಿ ಮಾತ್ರ ಹೂಡಿಕೆ ಮಾಡಿರಿ**

- ಷೇರು ಬೆಲೆ ಏರಿಕೆ, ಪಕ್ಕನೇ ಮಾರುಕಟ್ಟೆ ಹೆಚ್ಚಾಗುವ ಕಂಪೆನಿಗಳಲ್ಲಿ ಹೂಡಿಕೆ ಮಾಡಬೇಡಿ, ಬಿಸಿಲ್ಗುದುರೆಯ ಬೆನ್ನಟ್ಟಿ ಸಾಗಬೇಡಿ
- ಮೂಲಭೂತವಾಗಿ ಭದ್ರವಾಗಿರುವ ಕಂಪೆನಿಗಳಲ್ಲೇ ಹೂಡಿಕೆ ಮಾಡಿರಿ, ಯಾಕೆಂದರೆ ಮಾರುಕಟ್ಟೆಯಲ್ಲಿನ ಏರು ಪೇರುಗಳನ್ನು ಇಂತಹ ಕಂಪೆನಿಗಳಿಗೆ ಮಾತ್ರ ಸಹಿಸಿಕೊಳ್ಳುವ ಸಾಮರ್ಥ್ಯ ಇದೆ ಮತ್ತು ದೀರ್ಘಕಾಲದಲ್ಲಿ ಉತ್ತಮ ನಿರ್ವಹಣೆ ತೋರಬಹುದು.
- ಇಕ್ವಿಟಿ ಹೂಡಿಕೆಯನ್ನು ಕಂಪೆನಿಗೆ/ಪ್ರಮೋಟರ್ಸ್‌ಗಳಿಗೆ ತಿರುಗಿ ಮಾರಾಟ ಮಾಡಲು ಸಾಧ್ಯವಿಲ್ಲ.
- ಸ್ಟ್ರೋಂಗ್ ಸ್ಟೋಕ್ಸ್‌ಗಳು ಲಿಕ್ವಿಡ್ ಸ್ಟೋಕ್ಸ್‌ಗಳಿಗೆ ಸಮಾನವಾಗಿವೆ. ಯಾವುದೂ ಶಾಶ್ವತ ಅಲ್ಲ

**ಸೂತ್ರ 2**

**ಜಾಗ್ರತೆಯಿಂದ ಓದಿರಿ**

- ನೀವು ಕಷ್ಟಪಟ್ಟು ಸಂಪಾದಿಸಿದ ಹಣವನ್ನು ಯಾವುದೇ ಮುಂದಾಲೋಚನೆ ಇಲದೆ ಬಳಸಬೇಡಿರಿ
- ಕಠಿಣ ಪರಿಶ್ರಮ, ಸೂಕ್ಷ್ಮ ಜ್ಞಾನ ಅಗತ್ಯ
- ಯಾವುದೇ ಆಫರ್ ಬಗ್ಗೆ ಓದಿರಿ. ಈ ಸಲಹೆಯನ್ನು ಬಳಕೆಗೆ ತರಲು ಕಷ್ಟ ಆಗಬಹುದು. ಯಾಕೆಂದರೆ ಸಣ್ಣ ಅಕ್ಷರಗಳಲ್ಲಿರುವ 1000 ರಷ್ಟು ಪುಟಗಳನ್ನು ಓದಲು ಹರಸಾಹಸ ಪಡಬೇಕಾದೀತು. ಆದರೂ ನೀವು ಜಾಗ್ರತೆವಹಿಸಬೇಕಾದ ವಿಚಾರಗಳಾದ ಕಷ್ಟನಷ್ಟಗಳು ಸಂಭವಿಸುವ ಸಂದರ್ಭ, ಸಮಸ್ಯಾತ್ಮಕ ವಿಚಾರಗಳು, ಕಂಪೆನಿ ಎದುರಿಸುತ್ತಿರುವ ಕಾನೂನು ಕ್ರಮಗಳು, ಕಂಪೆನಿಯ ಚರಿತ್ರೆ, ಪ್ರಮೋಟರ್ಸ್, ಯೋಜನೆ, ಉದ್ದೇಶ, ಕಾನುನಿನ ಅನುಸಾರ ಇರುವ ಪ್ರಮಾಣ ಪತ್ರಗಳು ಹಾಗೂ ಮೂಲ ಹಣಕಾಸು ವಿಚಾರಗಳನ್ನು ಓದಲೇ ಬೇಕು.

**ಸೂತ್ರ 3**

**ಬದುಕಿನ ಹಂತದಂತೆ ಹೂಡಿಕೆ ಮಾಡಿರಿ**

- ಸಣ್ಣ ಪ್ರಾಯದಲ್ಲಿ ನಿಮಗೆ ಹೆಚ್ಚು ಜವಾಬ್ದಾರಿ ತೆಗೆಯಲು, ಸಾಹಸಕ್ಕೆ ಮೂಮದಾಗಲು ಸಾಧ್ಯವಾಗುತ್ತದೆ, ಆಗ ನೀವು ಸಾಹಸಿಕವಾಗಿ ಹೂಡಿಕೆಮಾಡಬಹುದು.
- ನೀವು 50 ವರ್ಷ ದಾಟಿದ ನಂತರ ನೀವು ಹೆಚ್ಚು ತೊಂದರೆ ಕೊಡದ ಮಾರ್ಗದಲ್ಲಿ ಹೂಡಿಕೆ ಮಾಡಿರಿ.
- ಪ್ರಾಯ 55/60 ವರ್ಷಗಳು ದಾಟಿದ ನಂತರ ಇಕ್ವಿಟಿಯಿಂದ ದೂರ ಇರಿ. (ನೀವು ಹಣ ಸಂಪಾದನೆಯಿಂದ ದೂರವಾದ ನಂತರ ಹೂಡಿಕೆಮಾಡಿ ಹಣ ನಷ್ಟ ಆದರೆ ಸರಿದೂಗಿಸಲು ಬೇರೆ ದಾರಿ ಇರುವುದಿಲ್ಲ) ಈ ಪ್ರಾಯದಲ್ಲಿ ಟಿವಿಯಲ್ಲಿ ಶೇರ್‌ಬೆಲೆ ವೀಕ್ಷಿಸುವುದಕ್ಕಿಂತಲೂ ಆಸಕ್ತಿದಾಯಕವಾದ ಅನೇಕ ವಿಚಾರಗಳಿವೆ!

**ಸೂತ್ರ 4**

**ಇನೀಶ್ಯಲ್ ಪಬ್ಲಿಕ್ ಆಫರ್‌ಗಳಲ್ಲಿ ಹೂಡಿಕೆಮಾಡಿರಿ**

- ಈ ರಂಗಕ್ಕೆ ಕಾಲಿರಿಸುವವರಿಗೆ ಐಪಿಒ ಉತ್ತಮ ಹೆಬ್ಬಾಗಿಲಾಗಿದೆ

ಶೇರ್ ಮಾರುಕಟ್ಟೆಯಲ್ಲಿ ಗೂಳಿ ಆಡುತ್ತಿರುವಾಗ ಎಲ್ಲಾ ಐಪಿಒಗಳು ಧನಾತ್ಮಕವಾಗಿ ಬೆಳೆದು ಹೆಚ್ಚು ಬೆಲೆ ತೋರಿಸುತ್ತದೆ ಹಾಗೂ ಲಿಸ್ಟ್ ಆದ ಸಂದರ್ಭದಲ್ಲಿ ಆಕರ್ಷಕ ಹೆಚ್ಚಳವನ್ನೂ ದಾಖಲಿಸುತ್ತದೆ. ಇದನ್ನು ಸದುಪಯೋಗ ಮಾಡದಿದ್ದರೆ ಅದು ಆತನ ಆಸೆ ಬುರುಕುತನ ಹಾಗೂ ಕಂಪೆನಿ/ಕೈಗಾರಿಕೆ/ಮಾರ್ಕೆಟ್‌ನ್ನು ಸರಿಯಾಗಿ ಅರ್ಥಮಾಡದ ಮನಸ್ಥಿತಿಯನ್ನು ತೋರ್ಪಡಿಸುತ್ತದೆ. ಅನಂತರ ಐಪಿಒಗಳನ್ನು ದೂರಿ ಪ್ರಯೋಜನ ಇಲ್ಲ. ಇದನ್ನು ನೆನಪಿಡಲೇ ಬೇಕು

- ಹೂಡಿಕೆದಾರರ ಮೇಲೆ ಯಾವುದನ್ನೂ ಹೇರಲಾಗುವುದಿಲ್ಲ, ಐಪಿಒಗಳನ್ನು ಬೇಕಿದ್ದರೆ ಪಡೆಯಬಹುದು.
- ಐಪಿಒ ಅನ್ನು ಒಂದು ಪೀಟದಲ್ಲಿರಿಸಿ ನಿರಂತವಾಗಿ ಉತ್ತಮ ನಿರ್ವಹಣೆ ತೋರುವಂತೆ ಆಗ್ರಹಮಾಡುತ್ತೇವೆ. ಲಿಸ್ಟಿಂಗ್‌ದಿನದಂದು ಐಪಿಒ ಲಿಸ್ಟಡ್ ಸ್ಟೋಕ್‌ಆಗುತ್ತದೆ. ಅನಂತರ ಅದು ಅದೇ ರೀತಿಯಲ್ಲಿ ವರ್ತಿಸುತ್ತದೆ.
- ನೀವು ಐಪಿಒ ದಲ್ಲಿ ಹೂಡಿಕೆ ಮಾಡುತ್ತೀರಾ ಅಥವಾ ಕಂಪೆನಿಯಲ್ಲಿ ಹೂಡಿಕೆ ಮಾಡುತ್ತೀರಾ ಎಂದು ನಿರ್ಧರಿಸಿ. ಈಪಿಒ ದಲ್ಲಾದರೆ ಅದು ಲಿಸ್ಟ್ ಆದ ದಿನದಂದೇ ತೊರೆಯಿರಿ. ಕಂಪೆನಿಯಲ್ಲಾದರೆ ಲಿಸ್ಟೆಡ್ ಆದರೂ ನಿಮ್ಮ ಇಚ್ಛೆ ತನಕ ಮುಂದುವರಿಯಿರಿ.

ಯಾವ ವಿಚಾರದಲ್ಲಾದರೂ ಕ್ಯೂಐಬಿ ಸುಧೃಢವಾಗಿದ್ದರೆ ನೀವು ಹೂಡಿಕೆಮಾಡಬಹುದು.

ಇದು ಮಾತ್ರವಲ್ಲ ಎಎಸ್‌ಬಿಎ ರೀತಿಯನ್ನೂ ಹೂಡಿಕೆಗೆ ಬಳಸಿ.

**ಸೂತ್ರ 5**

**ಸಾರ್ವಜನಿಕ ವಲಯದ ಐಪಿಒಗಳಲ್ಲಿ ಹೂಡಿಕೆ ಮಾಡಬಹುದು**

- ಅತ್ಯುತ್ತಮ ಹಾಗೂ ಲಾಭದಾಯಕವಾಗಿರುವ ಸಾರ್ವಜನಿಕ ವಲಯದ ಸಂಸ್ಥೆಗಳ ಐಪಿಒಗಳಲ್ಲಿ ನಷ್ಟ ಸಂಭವಿಸುವ ಅವಕಾಶ ಕಡಿಮೆ ಇರುತ್ತದೆ.
- ರಿಟೈಲ್ ಇನ್‌ವೆಸ್ಟರ್ಸ್‌ಗಳಿಗೆ ಯಾವಾಗಲೂ ರಿಯಾಯಿತಿ ಇರುತ್ತದೆ.
- ಲಿಸ್ಟಿಂಗ್ ಬೆಲೆಯ ಬಗ್ಗೆ ತಲೆ ಕೆಡಿಸಬೇಡಿರಿ, ಹೂಡಿಕೆ ಮಾಡಿಕೊಳ್ಳಿ

**ಸೂತ್ರ 6**

**ಮ್ಯೂಚುವಲ್ ಫಂಡ್‌ನಲ್ಲಿ ಹೂಡಿಕೆ ಮಾಡಿರಿ, ಆದರೆ ಜಾಗರೂಕತೆಯಿಂದ ಆಯ್ಕೆ ಮಾಡಿರಿ**

- ಭಾರತ ದೇಶದಲ್ಲಿ ಮ್ಯೂಚುವಲ್ ಫಂಡ್‌ನಲ್ಲಿ ಕಾರ್ಪರೇಟ್‌ಮನಿ ಮುಂಚೂಣಿಯಲ್ಲಿವೆ. ಕಿರು ಹೂಡಿಕೆದಾರರ ಬಗ್ಗೆ ಹೆಚ್ಚೇನೂ ಆಸಕ್ತಿ ತೋರ್ಪಡಿಸಲಿಲ್ಲ.
- ಹೀಗಿದ್ದರೂ ಮ್ಯೂಚುವಲ್ ಫಂಡ್‌ಗಳು ಸಣ್ಣ ಹೂಡಿಕೆದಾರರಿಗೆ ಉತ್ತಮ ಅವಕಾಶವಾಗಿದೆ.
- ಅನೇಕ ಮ್ಯೂಚುವಲ್ ಫಂಡ್‌ಗಳು, ಅನೇಕ ಸ್ಕೀಂಗಳು ಲಭ್ಯವಿವೆ ಅದನ್ನು ವಿವೇಚನೆಯಿಂದ ಆಯ್ಕೆಮಾಡಿ

**ಸೂತ್ರ 7**

**ಮಾರಾಟ ಮಾಡಲು ಕಲಿಯಿರಿ**

- ಹೆಚ್ಚಿನ ಹೂಡಿಕೆದಾರರು ಶೇರುಗಳನ್ನು ಪಡೆದು ಜಾಗ್ರತೆಯಿಂದ ತೆಗೆದಿರಿಸುತ್ತಾರೆ(ಮಾಧ್ಯಮಗಳಲ್ಲಿ ಸಲಹೆ ನೀಡುವ ಹೆಚ್ಚಿನ ತಜ್ಞರು ಶೇರು ಪಡಕೊಂಡು ತೆಗೆದಿರಿಸಲು ಶಿಫಾರಸು ಮಾಡುತ್ತಾರೆಯೇ ಹೊರತು ಮಾರಾಟ ಮಾಡುವ ಕಲೆ ತಿಳಿಸುವುದಿಲ್ಲ)
- ಲಾಭ ನಿಮಗೆ ಲಾಭವಾಗುವುದು ಅದು ನಿಮ್ಮ ಖಾತೆಗೆ ಹಣವಾಗಿ ಜಮಾ ಆದನಂತರವೇ(ಹೊರತು ಕಾಗದದಲ್ಲೋ, ಎಕ್ಸಲ್ ಶೀಟಲ್ಲೋ ಅಲ್ಲ)
- ಒಂದು ವಿಷಯ ನೆನಪಿಡಿ, ನಿಮಗೆ ಮಾರ್ಕೆಟ್‌ನಲ್ಲಿ ಲಾಭಾಂಶ ಹೆಚ್ಚು ಮಾಡಲು ಸಾಧ್ಯವಿಲ್ಲ ಆದುದರಿಂದ ಲೋಭತನ ಮಾಡಬೇಡಿ
- ನಿಮಗೆ ಎಷ್ಟು ಲಾಭ ದೊರೆಯಬೇಕೆಂದು ನೀವೇ ನಿಗದಿ ಪಡಿಸಿ ಆ ಮಿತಿಯಲ್ಲಿ ಮಾರಾಟ ಮಾಡಿ

**ಸೂತ್ರ 8**

**ಅಂಗೀಕೃತ ಮದ್ಯವರ್ತಿಗಳಲ್ಲಿ ಮಾತ್ರ ವ್ಯವಹಾರ ಮಾಡಿ**

- ಮಾರ್ಕೆಟ್‌ನಲ್ಲಿ ಅನೇಕ ಅನಧಿಕೃತ ವ್ಯಕ್ತಿಗಳು ನಿಮ್ಮನ್ನು ಅತೀ ಹೆಚ್ಚು ಲಾಭಾಂಶ ದೊರಕಿಸಿಕೊಡುವ ಬಗ್ಗೆ ಮಾತಿನ ಜಾಯಮಾನದಲ್ಲಿ ಸಿಲುಕಿಸಿ ನಂತರ ನಿಮ್ಮ ಹಣದೊಂದಿಗೆ ಮಾಯವಾಗುತ್ತಾರೆ.
- ನೋಂದಾಯಿತ ಮಧ್ಯವರ್ತಿಗಳಲ್ಲಿ ವ್ಯವಹಾರ ಮಾಡುವುದರಿಂದ ನಿಮ್ಮ ಹಣಕ್ಕೆ ಭದ್ರತೆ ದೊರೆಯುತ್ತದೆ. ಇದು ಮಾತ್ರವಲ್ಲದೆ ಅಗತ್ಯ ವಿದ್ದರೆ ಕಾನೂನು ಕ್ರಮ ಕೈಗೊಳ್ಳಲು ಅವಕಾಶ ಇದೆ.

**ಸೂತ್ರ 9**

**ಅತಿ ಆಸೆ ನಿಮ್ಮನ್ನು ವಂಚನೆಗೀಡುಮಾಡೀತು !**

- ಅನೇಕ ವಂಚನೆಗಾರರು ನಿಮ್ಮ ಅತಿ ಆಸೆಯನ್ನು ದುರುಪಯೋಗ ಮಾಡಲು ಹೊಂಚುಹಾಕುತ್ತಿದ್ದಾರೆ.
- ವಂಚನೆಗಾರರು ಸಣ್ಣ ಹೂಡಿಕೆದಾರರನ್ನು ಲೂಟಿ ಮಾಡುತ್ತಾರೆ.
- ನಿಮ್ಮ ಹಣವನ್ನು ಆಗ್ರಹಿಸುವ ವ್ಯವಸ್ಥೆ ಬಗ್ಗೆ ಜಾಗರೂಕರಾಗಿರಿ.

**ಸೂತ್ರ 10**

**ಎಲೆಕ್ಟ್ರಾನಿಕ್ ಮೀಡಿಯದಲ್ಲಿ ಬರುವ ಶೇರು ಮಾರುಕಟ್ಟೆಗೆ ಸಂಬಂಧಿಸಿದ ಸಲಹೆಗಳು ಸೇರಿದಂತೆ ಮಧ್ಯಮಗಳ ಬಗ್ಗೆ ನಿಗಾ ವಹಿಸಿ**

- ಕೇಪಿಟಲ್ ಮಾರ್ಕೆಟ್‌ನಲ್ಲಿರುವ ಅನೇಕ "ಪುಣ್ಯಾತ್ಮರು" ಉಚಿತವಾಗಿ ಸಲಹೆ ನೀಡುತ್ತಿದ್ದಾರೆ.
- ಆದರೆ ವಾಸ್ತವದಲ್ಲಿ ಇಂತಹ ಉಚಿತ ಸಲಹೆಗಾರರಿಗೆ ಅವರದ್ದೇ ಆದ ಹಿತಾಸಕ್ತಿಗಳಿರುತ್ತವೆ.
- ಇ ಮೇಲ್ ಹಾಗೂ ಎಸ್‌ಎಂಎಸ್‌ನಲ್ಲಿ ಬರುವ ಶೀಘ್ರದಲ್ಲಿ ಶ್ರೀಮಂತರಾಗುವ ಸ್ಕೀಂಗಳ ಬಗ್ಗೆ ಜಾಗೃತರಾಗಿರಿ

**ಸೂತ್ರ 11**

**ಜಾಹೀರಾತುಗಳಲ್ಲಿ ಮೈಮರೆಯದಿರಿ**

- ನಿಮ್ಮನ್ನು ಖುಷಿ ಪಡಿಸಲು ಜಾಹಿರಾತುಗಳು ಪ್ರಯತ್ನಿಸುತ್ತಿವೆ
- ಅರ್ಕಷಕ ತಲೆಬರಹ, ಮನಸೂರೆಗೊಳ್ಳುವ ವಿನ್ಯಾಸ, ಮೋಡಿಮಾಡುವ ಸೂಚನೆಗಳಿಂದ ಇಹಲೋಕ ಮರೆಯದಿರಿ

**ಸೂತ್ರ 12**

**ನಿಗದಿತ/ಘೋಷಿತ ಆದಾಯದ ಬಗ್ಗೆ ಜಾಗೃತರಾಗಿರಿ**

- ಬ್ಯಾಂಕ್‌ನ ಮಿತಿಗಿಂತ ಹೆಚ್ಚು ಆದಾಯ ನೀಡುವ ಭರವಸೆ ದೊರಕಿದ್ದರೆ ಆ ಬಗ್ಗೆ ಶಂಕಿತರಾಗಿರಿ
- ತೋಟಗಾರಿಕಾ ಕಂಪೆನಿಗಳು ಬಲು ದೊಡ್ಡ ಲಾಭದ ಭರವಸೆ ನೀಡಿದ್ದರು (ಕೆಲವು ಕಂಪೆನಿಗಳು ಒಂದನೇ ದಿನದಂದೇ ಶೇ.50 ರಷ್ಟು ಲಾಭದ ಭರವಸೆ ನೀಡಿದ್ದರು)

**ಸೂತ್ರ 13**

**ಅನಧಿಕೃತ ಮಾರುಕಟ್ಟೆಯ ಆಕರ್ಷಣೆಯಿಂದ ದೂರವಿರಿ**

- ಇದು ಕೃತಕ ಹಾಗೂ ಪ್ರಮೋಟರ್‌ಗಳೇ ಸೃಷ್ಟಿಸುವ ವಾಸ್ತವ ಇರದ ವಿಚಾರಗಳ ಸಂತೆ

**ಸೂತ್ರ 14**

**ಯಾವುದಾದರೊಂದು ವಿಭಾಗದ ಕಂಪೆನಿಗಳ ಆಕರ್ಷಣೆಯಲ್ಲಿ ಸಿಲುಕಿಕೊಳ್ಳಬೇಡಿ**

- ಪ್ರಸ್ತುತ ಮೂಲಭೂತ ಸೌಕರ್ಯ, ಸಾಗಾಟ ಕಂಪೆನಿಗಳ ಬಗ್ಗೆ ಆಕರ್ಷಣೆ ಹೆಚ್ಚಾಗಿದೆ.
- ಒಂದು ವಿಭಾಗದಲ್ಲಿರುವ ಎಲ್ಲಾ ಕಂಪೆನಿಗಳು ಉತ್ತಮ ನಿರ್ವಹಣೆ ತೋರುತ್ತವೆ ಎಂದು ನಂಬಿ ಕುಳಿತುಕೊಳ್ಳಬೇಡಿ. ಕೆಲವು ಉತ್ತಮ ಕಂಪೆನಿಗಳಿರ ಬಹುದು, ಕೆಲವು ಮಧ್ಯಮ ಕಂಪೆನಿಗಳಿರಬಹುದು, ಇನ್ನೂ ಕೆಲವು ಉತ್ತಮ ನಿರ್ವಹಣೆ ತೋರದ ಕಂಪೆನಿಗಳಿರಬಹುದು.
- ಕೆಲವು ಕಂಪೆನಿಗಳು ಹೂಡಿಕೆದಾರರನ್ನು ಆಕರ್ಷಿಸಲು ಆಯಾ ಸಂದರ್ಭದಲ್ಲಿ ಆಕರ್ಷಕವಾಗಿರುವ ವಿಭಾಗಕ್ಕೆ ಅನುಗುಣವಾಗಿ ಹೆಸರು ಬದಲಾಯಿಸುತ್ತವೆ. ಈ ಬಗ್ಗೆ ಜಾಗರೂಕರಾಗಿರಿ

**ಸೂತ್ರ 15**

**ಯಾವಾಗಲೂ ಸವಾಲು ಕಡಿಮೆ ಇರುವ ವಿಭಾವವನ್ನೇ ನಂಬಿಕೊಂಡಿರಬೇಡಿ.**

- ಐಪಿಒ ಗ್ರೇಡಿಂಗ್
- ಮುಕ್ತ ನಿರ್ದೇಶಕರು

**ಸೂತ್ರ 16**

**ಆಡಿಟ್ ಆದ ಅಕೌಂಟ್‌ಗಳ ಮೇಲೆ ಮಾತ್ರ ನಂಬುಗೆ ಇರಿಸಿ ನಿರ್ಧಾರ ತೆಗೆದುಕೊಳ್ಳಬೇಡಿ**

- ಸತ್ಯಂ ಪ್ರಕರಣ ನೆನಪಿಗೆ ತನ್ನಿ, ಸುಳ್ಳು ಅಕೌಂಟ್ ಹಾಗೂ ಲೆಕ್ಕಪತ್ರಗಳ ಜಾಹೀರಾತು ಅನೇಕ ಹೂಡಿಕೆದಾರರನ್ನು ಕೂಪಕ್ಕೆ ತಳ್ಳಿತು.
- ಅಕೌಂಟ್ಸ್ ಮೇಲಿನ ನೋಟ್ಸ್ ಮತ್ತು ಕ್ವಾಲಿಫಿಕೇಶನ್ ಓದಿರಿ
- ವರ್ಗಾವಣೆಯಲ್ಲಿ ಅಸ್ವಾಭಾವಿಕ ದಾಖಲಾತಿ, ಸಂಡ್ರಿ ಡೆಬ್ಟರ್ಸ್, ಸಬ್ಸಿಡಿಯರಿ ಅಕೌಂಟ್‌ಗಳ ಬಗ್ಗೆ ವಿಶೇಷ ನಿಗಾ ಇಟ್ಟು ಪರಿಶೀಲಿಸಿ.

**ಸೂತ್ರ 17**

**ಕಡಿಮೆ ಬೆಲೆ ಶೇರುಗಳನ್ನು ಪಡಕೊಳ್ಳಬೇಕೆಂದೇನೂ ಇಲ್ಲ**

- ಬೆಲೆಯನ್ನು ಬೆನ್ನಟ್ಟಬೇಡಿ, ಮೌಲ್ಯವನ್ನು ಬೆನ್ನಟ್ಟಿ
- ಕಂಪೆನಿಯ ಕಳಪೆ ನಿರ್ವಹಣೆಯಿಂದ ಬೆಲೆ ಇಳಿದಿರಬಹುದು (ಆ ಕಂಪೆನಿಯ ಮೇಲಿನ ಅಮಿತ ವಿಶ್ವಾಸ, ಅದರ ವಲಯದ ಮೇಲಿನ ವಿಶ್ವಾಸ ನಿಮ್ಮನ್ನು ದಾರಿ ತಪ್ಪಿಸಬಹುದು).
- ಶೇರ್‌ನ ಮುಖ ಬೆಲೆಯನ್ನು ವಿಭಾಗಮಾಡಿದುದರಿಂದ ಶೇರಿನ ಬೆಲೆ ಕಡಿಮೆ ಆಗಿರಬಹುದು (500ಕ್ಕಿಂತಲೂ ಹೆಚ್ಚು ಕಂಪೆನಿಗಳು ಈ ರೀತಿ ಮುಖಬೆಲೆಯನ್ನು ತುಂಡು ತುಂಡುಮಾಡಿ ಶೇರು ಮಾರಟ ಮಾಡಿವೆ).
  - ಇದಕ್ಕೆ ಕಾರಣಗಳನ್ನೂ ನೀಡಲಾಗಿದೆ. ಸಾಮಾನ್ಯ ಹೂಡಿಕೆದಾರರಿಗೆ ಎಟಕುವಂತೆ ಶೆರು ಬೆಲೆಯನ್ನು ಕಡಿಮೆ ಮಾಡುವುದು
  - ಡಿಮಾಟ್‌ಗೆ ಅನ್ವಯ ಆಗುವುದಿಲ್ಲ, ಒಬ್ಬನಿಗೆ ಇನ್ನೂ ಒಂದು ಷೇರು ಪಡಕೊಳ್ಳಬಹುದು.
  - ನಿಜವಾದ ಕಾರಣ : ಶೇರುಗಳ ಬೆಲೆ "ಕಡಿಮೆ"ಎಂದು ತೋರ್ಪಡಿಸಲು
  - ರೂ.50 ಮುಖಬೆಲೆ ಇರುವ ಕಂಪೆನಿಗಳ ಶೇರುಗಳನ್ನು 1:10 ಅನುಪಾತದಲ್ಲೂ ವಿಭಾಗವಾಗಿ ಮಾಡಲಾಗಿದೆ!

**ಸೂತ್ರ 18**

**ಕೆಲವು ಕಂಪೆನಿಗಳ ಪ್ರಮೋಟರ್‌ಗಳೇ ಷೇರುಗಳನ್ನು ಬಿಡುಗಡೆಮಾಡುತ್ತಾರೆ/ ಭರವಸೆಗಳನ್ನು ನೀಡುತ್ತಾರೆ**

- ಕಂಪೆನಿಗಳ ಪ್ರಮೋಟರ್‌ಗಳಿಗೆ ಅನುವು ಮಾಡಲಾದ ಸೌಲಭ್ಯಗಳು ಅವರಲ್ಲೇ ನಿಕ್ಷಿಪ್ತವಾಗಿವೆ. (ಸರಿಯಾದ ಷೇರು ಇಷ್ಯೂವಿಗೆ ಹೂಡಿಕೆಮಾಡುವುದೇ ನಿಜವಾದ ದಾರಿ)

**ಸೂತ್ರ 19**

**ಕಾರ್ಪರೇಟ್ ಗವರ್ನೆನ್ಸ್ ಅವಾರ್ಡ್/ ಸಿಎಸ್‌ಆರ್ ಮೊದಲಾದ ಪ್ರಶಸ್ತಿಗಳು, ಗೌರವಗಳಿಂದ ಮೋಸಹೋಗಬೇಡಿ**

- ಮೋಸಮಾಡುವ ಕಂಪೆನಿಗಳು ಇಂತಹ ಗಿಮಿಕ್‌ಗಳನ್ನು ಬಳಸಿ ತಮ್ಮ ಗುಣಮಟ್ಟವನ್ನು ಹೆಚ್ಚಿಸುವ ನಾಟಕ ಮಾಡುತ್ತವೆ.

**ಅಂತಿಮ ಸೂತ್ರ 20**

**ಪ್ರಾಮಾಣಿಕರಾಗಿರಿ**

- ನೀವು ಪ್ರಮಾಣಿಕರಾಗಿದ್ದರೆ ಮಾತ್ರ ಇನ್ನೊಬ್ಬರಿಂದಲೂ ಪ್ರಾಮಾಣಿಕತೆ ಬಯಸಬಹುದು.
- ನಾವು ಮೂಲೆಗುಂಪಾದ ಹೂಡಿಕೆದಾರರು/ ಹೂಡಿಕೆದಾರರ ಬಲಿಷ್ಠ ಸಂಘಟನೆ ಇಲ್ಲ/ ಎಲ್ಲಾ ವಿಷಯಗಳನ್ನು ಅದರಷ್ಟಕ್ಕೇ ಬಿಟ್ಟುಬಿಡುತ್ತೇವೆ.
- ಬಲಿಷ್ಠ ಹೂಡಿಕೆದಾರರ ಸಂಘಟನೆ ರಚಿಸಬೇಕು/ ಅಂತಹ ಸಂಘಟನೆಗಳಿಗೆ ಸೇರಬೇಕು. ನ್ಯಾಯಕ್ಕಾಗಿ ಹೋರಾಡಬೇಕು
- ವ್ಯವಹಾರದಲ್ಲಿ ಲೋಪದೋಷಗಳಿದ್ದರೆ ಅದನ್ನು ಬಯಲಿಗೆಳೆಯಲು ಒತ್ತಾಯ ಮಾಡಬೇಕು. ಕೈಬಿಟ್ಟು ಹೋದುದರನ್ನು ಮರಳಿ ಪಡೆಯಲು ಹೋರಾಟ ಮಾಡಬೇಕು.

# ಹೂಡಿಕೆದಾರರ ಹಕ್ಕುಗಳು

**ಕೇಪಿಟಲ್ ಮಾರ್ಕೆಟ್**

ಸೆಕ್ಯುರಿಟೀಸ್‌ಗಳ ಮಾರ್ಕೆಟ್ ಆಗಿದೆ ಕೇಪಿಟಲ್ ಮಾರ್ಕೆಟ್ (ಇಕ್ವಟಿ ಮತ್ತು ಡೆಪ್ಟ್), ಈ ಮಾರ್ಕೆಟ್‌ನಿಂದ ಕಂಪೆನಿಗಳು, ಸರಕಾರ ದೀರ್ಘಾವಧಿಯ ನಿಧಿಯನ್ನು ಪಡೆಯುತ್ತವೆ. ಸೆಕಂಡರಿ ಕೇಪಿಟಲ್ ಮಾರ್ಕೆಟ್ ಇಂತಹ ಸೆಕ್ಯುರಿಟೀಸ್‌ಗಳ ಮಾರಾಟಕ್ಕೆ ಸೌಕರ್ಯ ಒದಗಿಸುತ್ತದೆ. ಈ ವಲಯಕ್ಕೆ ನಿಯಂತ್ರಕರಾದ ಸೆಬಿ ಮತ್ತು ಆರ್‌ಬಿಐ ಮೇಲ್ನೋಟ ವಹಿಸುತ್ತದೆ ಹಾಗೂ ಈ ಮಾರುಕಟ್ಟೆಯ ಆರೋಗ್ಯಕರ ಬೆಳವಣಿಗೆಗೆ ಹಾಗೂ ಹೂಡಿಕೆದಾರರ ಸಂರಕ್ಷಣೆ ನಡೆಸುತ್ತದೆ.

ಷೇರುದಾರರು ಕಂಪೆನಿಯ ನಿಜವಾದ ಮಾಲಕರಾಗಿರುತ್ತಾರೆ. ಕಂಪೆನಿ ಉತ್ತಮ ರೀತಿಯಲ್ಲಿ ನಿರ್ವಹಣೆ ತೋರಿದರೆ ಷೇರುದಾರರಿಗೆ ಡಿವಿಡೆಂಡ್ ಮೊದಲಾದವುಗಳು ದೊರೆಯುತ್ತದೆ. ಆದರೆ ಕಂಪೆನಿ ನಷ್ಟದಲ್ಲಿ ಸಾಗಿದರೆ ಷೇರಿನ ಮೂಲಕ ಹೂಡಿದ ಹಣ ಸಂಪೂರ್ಣವಾಗಿಯೋ ಅಂಶಿಕವಾಗಿಯೋ ನಷ್ಟವಾಗುವ ಸಾಧ್ಯತೆಗಳಿವೆ

**ಷೇರುದಾರರಿಗಿರುವ ಹಕ್ಕುಗಳು**

- ಅಲೋಟ್‌ಮೆಂಟ್ ಮಾಡಿದಾಗ ಷೇರು ಪಡೆಯಲು, ನಿಗದಿತ ಸಮಯದೊಳಗೆ ಪಡಕೊಳ್ಳುವ ಹಕ್ಕು
- ವಾರ್ಷಿಕ ವರದಿಯೊಂದಿಗೆ ವಾರ್ಷಿಕ ಲೆಕ್ಕಪತ್ರ, ಲಾಭ–ನಷ್ಟ ಲೆಕ್ಕ ಮತ್ತು ಲೆಕ್ಕಪತ್ರ ಪರಿಶೋಧಕರ ವರದಿ ಪಡೆಯುವ ಹಕ್ಕು
- ನಿಗದಿತ ವೇಳೆಯಲ್ಲಿ ಡಿವಿಡೆಂಡ್ ಪಡೆಯುವ ಹಕ್ಕು
- ಅಂಗೀಕರಿಸಿದ ಕಾರ್ಪರೇಟ್ ಸೌಲಭ್ಯಗಳಾದ ಸರಿಯಾದ ಷೇರು ಇಶ್ಯೂ, ಬೋನಸ್ ಪಡೆಯುವ ಹಕ್ಕು
- ಕಂಪೆನಿಯನ್ನು ಬೇರೆಯವರು ಪಡಕೊಳ್ಳುವಾಗ (ಟೇಕ್‌ಓವರ್), ಲಿಸ್ಟ್‌ನಿಂದ ಹೊರತುಪಡಿಸುವಾಗ, ಬಯ್‌ಬ್ಯಾಕ್ ಮಾಡುವಾಗ ಓಫರ್‌ಗಳನ್ನು ಪಡೆಯುವ ಹಕ್ಕು
- ಸಭೆಗಳಲ್ಲಿ ಭಾಗವಹಿಸುವ ಹಾಗೂ ಮತದಾನ ಮಾಡುವ ಹಕ್ಕು
- ಕಂಪೆನಿ ಕಾಯಿದೆ ಅನುಸಾರ ಇರುವ ದಾಖಲೆ ಪುಸ್ತಕಗಳನ್ನು ಕಂಪೆನಿಯ ನೋಂದಾಯಿತ ಕಚೇರಿಯಲ್ಲಿ ಪರಿಶೀಲಿಸಲಿರುವ ಹಕ್ಕು
- ಜನರಲ್ ಮೀಟಿಂಗ್‌ಗಳ ಮಿನಿಟ್ಸ್‌ಗಳನ್ನು ಪರಿಶೀಲಿಸುವ ಹಾಗೂ ಅದರ ಪ್ರತಿಗಳನ್ನು ಪಡೆಯುವ ಹಕ್ಕು
- ಹೂಡಿಕೆದಾರರದಲ್ಲಿ ಸಹಕಾರ ಮನೋಭಾವ ತೋರದ, ವಂಚನೆ ಮಾಡುವ ಕಂಪೆನಿಗಳ ಮೇಲೆ ದೂರು ನೀಡಲು ಹಾಗೂ ಪರಿಹಾರ ಪಡೆಯಲಿರುವ ಹಕ್ಕು.
- ಅನ್ಯಾಯ ಉಂಟಾದರೆ ಸಿವಿಲ್, ಕ್ರಿಮಿನಲ್ ಕಾಯಿದೆ ಅನುಸಾರ ಕಂಪೆನಿಯ ಮೇಲೆ ಕ್ರಮ ಕೈಗೊಳ್ಳಲು ಹಕ್ಕು
- ಕಂಪೆನಿ ಸ್ಥಗಿತವಾಗುತ್ತಿದ್ದರೆ ಮುಚ್ಚುಗಡೆ ಸಂದರ್ಭ ರೆಸಿಡುವಲ್ ಪ್ರೊಸೀಡಿಂಗ್ಸ್ ಪಡೆಯುವ ಹಕ್ಕು

**ಸಾಲ ಪತ್ರ ಮಾಲಕರ (ಡಿಬೆಂಚರ್‌ಹೋಲ್ಡರ್) ಹಕ್ಕುಗಳು**

- ಬಡ್ಡಿ / ಮರು ಪಾವತಿಯನ್ನು ನಿಗದಿತ ವೇಳೆಯಲ್ಲಿ ಪಡೆಯುವ ಹಕ್ಕು
- ಅರ್ಜಿ ಸಲ್ಲಿಸಿ ಟ್ರಸ್ಟ್‌ಡೀಡ್ ಪಡೆಯುವ ಹಕ್ಕು
- ಮೇಚುರ್ ಆಗುವ ವೇಳೆಯಲ್ಲಿ ಮರುಪಾವತಿ ದೊರೆಯದಿದ್ದರೆ ಸಿಎಲ್‌ಬಿಗೆ ಅರ್ಜಿ ಸಲ್ಲಿಸಲು ಹಕ್ಕು
- ಕಂಪೆನಿಯ ತನ್ನ ಸಾಲವನ್ನು ಮರುಪಾವತಿಮಾಡಲು ಸಿದ್ಧವಿಲ್ಲದಿದ್ದರೆ ಕಾರ್ಯಾಚರಣೆ ಕೊನೆಗೊಳಿಸಲು ಅರ್ಜಿ ಸಲ್ಲಿಸಲು ಹಕ್ಕು
- ಡಿಬೆಂಚರ್ ಟ್ರಸ್ಟಿಗೆ ಅಹವಾಲುಗಳನ್ನು ಸಲ್ಲಿಸಲು ಅವಕಾಶ

**ಸೆಕ್ಯುರಿಟೀಸ್ ಮಾರಾಟಮಾಡುವಾಗ/ಪಡಕೊಳ್ಳುವಾಗ ದೊರೆಯಬೇಕಾದ ಹಕ್ಕುಗಳು**

- ಅತ್ಯುತ್ತಮ ಬೆಲೆ
- ಬೆಲೆ / ಬ್ರೋಕೇಜ್ ಶುಲ್ಕದ ದಾಖಲೆ
- ನಗದು/ಷೇರುಗಳು ನಿಗದಿತ ಸಮಯಕ್ಕೆ
- ಬ್ರೋಕರ್, ಡೆಪೋಸಿಟ್‌ಮಾಡಿದವರ ಅಕೌಂಟ್ ಸ್ಟೇಟ್‌ಮೆಂಟ್

**ಸೆಕ್ಯುರಿಟೀಸ್ ಮಾರಾಟಮಾಡುವವರ/ಪಡಕೊಳ್ಳುವವರ ಜವಾಬ್ದಾರಿಗಳು**

- ಬ್ರೋಕರ್, ಡೆಪೋಸಿಟ್ ಮಾಡಿದವರು ಮೊದಲಾದವರೊಂದಿಗೆ ಬೇಕಾದ ಒಪ್ಪಂದಗಳಲ್ಲಿ ಏರ್ಪಡಬೇಕು
- ಸಿಂಧುವಾದ ಒಪ್ಪಂದ ಪತ್ರ ಇರಬೇಕು
- ನಿಗದಿತ ಸಮಯದಲ್ಲಿ ಪಾವತಿ ಮಾಡಬೇಕು
- ನಿಗದಿತ ಸಮಯದಲ್ಲಿ ಷೇರುಗಳನ್ನು ನೀಡಬೇಕು

**ತರ್ಕಪರಿಹಾರ ಪಡೆಯಲಿರುವ ಹಕ್ಕುಗಳು**

- ಮೋಸ ಮಾಡುವ ದರ
- ನ್ಯಾಯಯುತವಲ್ಲದ ಬ್ರೋಕೇಜ್
- ಹಣ ಅಥವಾ ಷೇರುಗಳನ್ನು ನೀಡುವಲ್ಲಿ ವಿಳಂಬ

**ಹೂಡಿಕೆದಾರರಾಗಿ ನಿಮ್ಮ ಜವಾಬ್ದಾರಿ**

- ಎಲ್ಲಾ ಮಾಹಿತಿಗಳನ್ನು ತಿಳಿದಿರಬೇಕು
- ಎಚ್ಚರದಿಂದಿರಬೇಕು
- ನಿಮ್ಮ ಹಕ್ಕುಗಳನ್ನು ನೀವು ವೈಯುಕ್ತಿಕವಾಗಿಯೋ, ಸಂಘಟಿತವಾಗಿಯೋ ಬಳಸಲು ಸಿದ್ಧರಿರಬೇಕು.

# ಬೇಕು ಮತ್ತು ಬೇಡಗಳು

## ಪ್ರಾಥಮಿಕ ಮಾರ್ಕೆಟ್

***ಬೇಕಾದವುಗಳು***

- ✓ ಪ್ರೋಸ್ಪೆಕ್ಟಸ್ / ಅದರ ಸಂಕ್ಷಿಪ್ತ ರೂಪಗಳನ್ನು ಕೂಲಂಕಷವಾಗಿ ಓದಿರಿ, ಓದುವಾಗ ಈ ಕೆಳಗಿನ ವಿಚಾರಗಳಿಗೆ ಹೆಚ್ಚಿನ ಗಮನ ಕೊಡಿರಿ
  - ✓ ತೊಂದರೆ ನೀಡುವ ವಿಷಯಗಳು
  - ✓ ಪ್ರಮೋಟರ್‌ಗಳ ಹಿನ್ನೆಲೆ
  - ✓ ಕಂಪೆನಿಯ ಚರಿತ್ರೆ
  - ✓ ಪರಿಹರಿಸಲು ಬಾಕಿ ಇರುವ ಸಮಸ್ಯೆಗಳು ಮತ್ತು ಡಿಫಾಲ್ಟ್‌ಗಳು
  - ✓ ಹಣಕಾಸು ಲೆಕ್ಕ ಪತ್ರಗಳು
  - ✓ ಷೇರು ಸಂಗ್ರಹದ ಉದ್ದೇಶಗಳು
  - ✓ ಇಶ್ಯೂದರ ನಿಗದಿಯ ಮೂಲ
  - ✓ ಅರ್ಜಿ ಸಲ್ಲಿಸಲು ನೀಡುವ ಸೂಚನೆಗಳು
- ✓ ಈ ಬಗ್ಗೆ ಏನಾದರೂ ಸಮಸ್ಯೆಗಳು/ ಸಂಶಯಗಳು ಕಂಡು ಬಂದಲ್ಲಿ ಪ್ರೋಸ್ಪಕ್ಟಸ್‌ನಲ್ಲಿ ನೀಡಲಾದ ಕಂಪ್ಲಿಯನ್ಸ್ ಆಫೀಸರ್‌ನನ್ನು ಸಂಪರ್ಕಿಸಬೇಕು.
- ✓ ಡಿಮ್ಯಾಟ್ ಅಕೌಂಟ್‌ಗೆ ಕ್ರೆಡಿಟ್ ಅಥವಾ ಅಪ್ಲಿಕೇಶನ್ ಮನಿಯ ಮರುಪಾವತಿ ನಿಗದಿತ ವೇಳೆಯಲ್ಲಿ ದೊರೆಯದಿದ್ದರೆ ಕಂಪ್ಲಿಯನ್ಸ್ ಆಫೀಸರ್‌ಗೆ ಹಾಗೂ ಪೋಸ್ಟ್ ಇಶ್ಯೂ ಲೀಡ್ ಮೆನೇಜರ್‌ಗೆ ದೂರು ನೀಡಿ

***ಬೇಡದವುಗಳು***

- × ಯಾವ ಭಾಗದಿಂದ ಬಂದರೂ ಯಾವುದೇ ಜಾಣಮಾತುಗಳಿಗೆ ಬಲಿ ಬೀಳಬೇಡಿ
- × ಮರುಕಟ್ಟೆಯಲ್ಲಿ ಗೂಳಿಯ ಆರ್ಭಟದಿಂದ ಉಂಟಾದ ಬೆಲೆ ಏರಿಕೆ ಅಲೆಗಳನ್ನು ನೋಡಿಯೋ, ಒಂದೇ ಕೈಗಾರಿಕೆ ರಂಗದಲ್ಲಿರುವ ಬೇರೆ ಕಂಪೆನಿಗಳ ಬೆಳವಣಿಗೆ ನೋಡಿಯೋ, ಷೇರು ಇಶ್ಯೂ ಮಾಡುವ ಕಂಪೆನಿ ಪ್ರಕಟಿಸಿದ ಪ್ರಕಟಣೆಗಳನ್ನು ನೋಡಿಯೋ ಹೂಡಿಕೆ ಮಾಡಲು ಹೋಗಬೇಡಿ.
- × ನೀವು ಪಡೆದ ಷೇರುಗಳ ಬೆಲೆ ಲಿಸ್ಟ್ ಮಾಡಿದ ನಂತರ ಖಚಿತವಾಗಿ ಹೆಚ್ಚಾಗುವುದೆಂದು ಬಲವಾದ ನಂಬಿಕೆ ಬೇಡ

## ಸೆಕಂಡರಿ ಮಾರ್ಕೆಟ್

***ಬೇಕಾದವುಗಳು***

- ✓ ಹೂಡಿಕೆ ಮಾಡುವ ಮೊದಲು ಆ ಕಂಪೆನಿಯ ಬಗ್ಗೆ ಖಚಿತ ಮಾಹಿತಿ ಪಡೆದುಕೊಳ್ಳಿರಿ. ಅವರ ಮೆನೇಜ್‌ಮೆಂಟ್, ಇತ್ತೀಚೆಗಿನ ಬೆಳವಣಿಗೆಗಳು, ವಿವಿಧ ಕಾಯಿದೆ ಕಾನೂನುಗಳ ಅನುಸಾರ ಮಾಡಲಾದ ಘೋಷಣೆಗಳನ್ನು ಪರಿಶೀಲಿಸಬೇಕು. ಎಕ್ಸ್‌ಚೇಂಜ್ ಮತ್ತು ಕಂಪೆನಿಗಳ ವೆಬ್‌ಸೈಟ್‌ಗಳು, ಡಾಟಾವೆಂಡರ್‌ಗಳ ಡಾಟಾವೇಸ್, ವಾಣಿಜ್ಯ ಪತ್ರಿಕೆಗಳು, ನಿಯತಕಾಳಿಕೆಗಳಿಂದ ಈ ಮಾಹಿತಿ ದೊರಕುವುದು.
- ✓ ಸವಾಲುಗಳಿಲ್ಲದ ಹೂಡಿಕೆಗಳು ಇಲ್ಲ. ನಾವು ಯಾವ ಮಟ್ಟದಲ್ಲಿ ಯಾವುದೆಲ್ಲಾ ರೀತಿ ನೀತಿಗಳನ್ನು ಅಳವಡಿಸಿ ಹೂಡಿಕೆ ಮಾಡುತ್ತೇವೋ ಆ ಮಟ್ಟದಲ್ಲಿ ಸವಾಲುಗಳು ಬರುತ್ತವೆ. ನಿಮ್ಮ ಸವಾಲು ಸ್ವೀಕರಿಸುವ ಮಟ್ಟವನ್ನು ಹೊಂದಿಕೊಂಡು ಹೂಡಿಕೆಯ ಕೌಶಲವನ್ನು ಅಳವಡಿಸಿಕೊಳ್ಳಬೇಕು
- ✓ ಹೂಡಿಕೆಯ ರಿಸ್ಕ್‌ರಿಟರ್ನ್ ಪ್ರೊಫೈಲನ್ನು ಅದೇ ರೀತಿ ಲಿಕ್ವಿಡಿಟಿ ಹಾಗೂ ಭದ್ರತಾ ವಿಚಾರಗಳನ್ನು ತಿಳಿದುಕೊಂಡು ನಿಮ್ಮ ಹೂಡಿಕೆಯ ತೀರ್ಮಾನ ಕೈಗೊಳ್ಳಬೇಕು
- ✓ ಸೆಬಿ ಅಂಗೀಕಾರ ಇರುವ ಸ್ಟೋಕ್ ಎಕ್ಸ್‌ಚೇಂಜ್‌ಗಳಲ್ಲಿ ಮಾತ್ರ ವಿಲೇವಾರಿ ಾಡಿರಿ.
- ✓ ಸೆಬಿಯಲ್ಲಿ ನೋಂದಾವಣಿ ಇರುವ ಬ್ರೋಕರ್/ಸಬ್ ಬ್ರೋಕರ್‌ಗಳಲ್ಲಿ ಮಾತ್ರ ವ್ಯವಹಾರ ಮಾಡಿರಿ
- ✓ ಕ್ಲಯಂಟ್ ರಿಜಿಸ್ಟ್ರೇಶನ್, ಕ್ಲಯಂಟ್ ಟ್ರೇಡ್ ಮೆಂಬರ್ ಅಗ್ರಿಮೆಂಟ್ ಮೊದಲಾದವುಗಳನ್ನು ಓದಿ ಮನನ ಮಾಡಬೇಕು. ಅಗತ್ಯ ಇರುವ ಎಲ್ಲಾ ಹಂತಗಳನ್ನು ಮುಗಿಸಿ ಬ್ರೋಕರ್‌ನಲ್ಲಿ ಅಕೌಂಟ್ ಆರಂಭಿಸಬೇಕು
- ✓ "ನೋ ಯುವರ್ ಕ್ಲಯಂಟ್" ಒಪ್ಪಂದ ಸಹಿಮಾಡಬೇಕು
- ✓ ಶಂಕೆಗೆ ಎಡೆಮಾಡದ, ಸ್ಪಷ್ಟವಾದ ಸೂಚನೆಯನ್ನು ನಿಮ್ಮ ಬ್ರೋಕರ್/ಸಬ್ ಬ್ರೋಕರ್/ಡಿಪಿ ಗೆ ನೀಡಬೇಕು.
- ✓ ಒಪ್ಪಂದ ಮಾಡಿಕೊಂಡು ಪ್ರತಿಯೊಂದ ವ್ಯವಹಾರ ನಡೆಸಿ. ಒಪ್ಪಂದವನ್ನು ದೊರಕಿದ ಕೂಡಲೇ ಪರಿಶೀಲಿಸಿರಿ. ನಿಮಗೇನಾದರೂ ಶಂಕೆಗಳಿದ್ದರೆ ನಿಮ್ಮ ವ್ಯವಹಾರದ ವಿವರಗಳನ್ನು ಎಕ್ಸ್ಚೇಂಜ್‌ನ ವೆಬ್‌ಸೈಟ್‌ನಲ್ಲಿರುವ ಮಾಹಿತಿಯೊಂದಿಗೆ ಹೋಲಿಸಿ ನೋಡಿ.
- ✓ ಅಗತ್ಯವಿರುವ ಮಾರ್ಜಿನನ್ನು ನಿಗದಿತ ಸಮಯದಲ್ಲಿ ಪಾವತಿಮಾಡಿ.

- ✓ ಮಾರಾಟ ಮಾಡುವಾಗ ಷೇರು/ಡೆಪೋಸಿಟರಿ ಸ್ಲಿಪನ್ನು, ಪಡಕೊಳ್ಳುವಾಗ ಹಣವನ್ನು ನಿಗದಿತ ಸಮಯದೊಳಗೆ ಪಾವತಿ ಮಾಡಿರಿ
- ✓ ಬ್ರೋಕರೇಜ್/ಪೇಯ್‌ಮೆಂಟ್/ಮಾರ್ಜಿನ್‌ಗಳನ್ನು ಅಧಿಕೃತ ವ್ಯಕ್ತಿಗೆ ನೀಡಿ
- ✓ ಮಾರ್ಜಿನ್‌ಗಾಗಿ ಡೆಪೋಸಿಟ್ ಮಾಡಿದ ಕೊಲಾಟೆರಲ್‌ಗೆ ರಸೀದಿ ಪಡೆಯಿರಿ
- ✓ ಡಿಪಿಯಿಂದ ನಿಮಗೆ ದೊರಕುವ ವ್ಯವಹಾರ ಮಾಡಿದ ಬಗ್ಗೆ ಹಾಗೂ ಹೋಲ್ಡಿಂಗ್ ಸ್ಟೇಟ್‌ಮೆಂಟ್‌ಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಿ
- ✓ ಡಿಪಿ ನೀಡಿದ ಹಸ್ತಾಂತರ ಸೂಚನೆ ಸ್ಲಿಪ್(ಡಿಐಎಸ್)ಪುಸ್ತಕವನ್ನು ನೋಡಿರಿ. ಅದರಲ್ಲಿ ಡಿಐಎಸ್ ನಂಬ್ರ ಮೊದಲೇ ಮುದ್ರಣವಾಗಿದೆಯೋ? ನಿಮ್ಮ ಅಕೌಂಟ್ ನಂಬ್ರ(ಕ್ಲಯಂಟ್ ಐಡಿ) ಮೊಹರು ಮಾಡಲಾಗಿದೆಯೋ ಎಂದು ಖಚಿತ ಪಡಿಸಿರಿ.
- ✓ ನೀವು ಖಾಯಂ ಆಗಿ ವ್ಯವಹಾರ ಮಾಡುವುದಿಲ್ಲದಿದ್ದರೆ, ನಿಮ್ಮ ಡಿಮ್ಯಾಟ್ ಖಾತೆಯನ್ನು ಫ್ರೀಜ್‌ಮಾಡಿಡುವ ಸೌಲಭ್ಯ ಬಳಸಿಕೊಳ್ಳಿರಿ.
- ✓ ಹೂಡಿಕೆಗೆ ಸಂಬಂಧಪಟ್ಟ ಎಲ್ಲಾ ಪ್ರಮಾಣಪತ್ರಗಳು ನಿಮ್ಮಲ್ಲಿರಲಿ. ವ್ಯವಹಾರ ಮಾಡುವ ಮೊದಲೇ ಸಂಬಂಧಿಸಿದ ಎಲ್ಲಾ ಪ್ರಶ್ನೆಗಳನ್ನು ಕೇಳಿ ಸಂಶಯ ಪರಿಹರಿಸಿಕೊಳ್ಳಿರಿ.

***ಬೇಡದವುಗಳು***

- × ಯಾವುದೇ ಹೂಡಿಕೆಯಲ್ಲಾದರೂ ಕಂಡುಬರುವ ಸಮಸ್ಯೆಗಳು, ಕಷ್ಟನಷ್ಟಗಳ ಬಗ್ಗೆ ಅರಿವುಳ್ಳವರಾಗಿರಬೇಕು
- × ಮಾರ್ಕೆಟ್‌ನಿಂದ ಹೊರಗಿನ(ಓಫ್ ಮಾರ್ಕೆಟ್) ವ್ಯವಹಾರಗಳನ್ನು ಕೈಗೊಳ್ಳಬಾರದು
- × ಅನಧಿಕೃತ ಮದ್ಯವರ್ತಿಗಳಲ್ಲಿ ವ್ಯವಹಾರ ಮಾಡಬಾರದು
- × ಯಾವುದೇ ಅಮಿಷಗಳಿಗೆ, ದೊಡ್ಡ ಮೊತ್ತದ ಲಾಭದ ಮಾತಿಗೆ ಬಲಿಬೀಳಬೇಡಿ
- × ಯಾರದೋ ಮಾತು ಕೇಳಿ, ವದಂತಿ ಕೇಳಿ, ಟಿಪ್ಸ್ ಕೇಳಿ ಹೂಡಿಕೆ ಮಾಡಬೇಡಿ
- × ಉತ್ತಮವಾಗಿ ಕಾರ್ಯಾಚರಿಸದ ಕಂಪೆನಿಗಳ ಷೇರುಗಳನ್ನು ಯಾವ ರೀತಿಯ ಒತ್ತಡಗಳಿದ್ದರೂ ಪಡಕೊಳ್ಳಬೇಡಿ. ಒಂದು ವೇಳೆ ಈ ಕಂಪೆನಿಗಳ ಬಗ್ಗೆ ಉತ್ತಮ ವರದಿ ಬಂದಿರಬಹುದು, ಆ ಕಂಪೆನಿಯ ಉತ್ಪನ್ನಗಳಿಗೆ ಪಕ್ಕನೇ ಬೇಡಿಕೆ ಹೆಚ್ಚಾಗಲೂ ಬಹುದು.
- × ಇನ್ನೊಬ್ಬರನ್ನು ಹಿಂಬಾಲಿಸಿ ಹೋಗಬೇಡಿ, ಮಾರ್ಕೆಟ್‌ನ ಯಾವ ಸಂದರ್ಭದಲ್ಲೂ ವಿವೇಚನೆ ಕಳಕೊಳ್ಳಬೇಡಿ.
- × ಟಿ ವಿ ಚಾನೆಲ್‌ಗಳಲ್ಲಿ, ವೆಬ್‌ಸೈಟ್‌ಗಳಲ್ಲಿ, ಎಸ್‌ಎಂಎಸ್‌ಗಳಲ್ಲಿ ಬಂದ ಹೂಡಿಕೆ ಬಗೆಗಿನ ಸಲಹೆಗಳನ್ನು ಅಂಧರಂತೆ ಅನುಸರಿಸಿ ಹೋಗಬೇಡಿ
- × ಸಂದರ್ಭದ ಒತ್ತಡಕ್ಕೆ ಮಣಿದು ಹೂಡಿಕೆ ನಿರ್ಧಾರ ತೆಗೆದುಕೊಳ್ಳಬೇಡಿ. ಇತರರು ಹೂಡಿಕೆ ಮಾಡಿ ಲಾಭ ಪಡೆದಿದ್ದಾರೆಂದು ಅವರ ನಿರ್ಧಾರದ ಮಾರ್ಗವನ್ನೇ ಅನುಸರಿಸಲು ಹೋಗಬೇಡಿ.
- × ಮಾರುಕಟ್ಟೆಯನ್ನು ನಿಯಂತ್ರಿಸಲು ಯತ್ನಿಸಬೇಡಿ.
- × ಸರಕಾರದ ಏಜೆನ್ಸಿಗಳಿಂದ ಅಂಗೀಕಾರ, ನೊಂದಣಿ ಮೊದಲಾದವುಗಳು ದೊರಕಿದೆ ಎಂದು ಕಂಪೆನಿ ಘೋಷಿಸಿದರೆ ಅದಕ್ಕೆ ಮರುಳಾಗಬೇಡಿ. ಯಾವುದಾದರೂ ಒಂದು ವಿಷಯಕ್ಕೆ ಅಂಗೀಕಾರ ದೊರಕಿರಬಹುದು.
- × ಕಂಪೆನಿಗಳು ಆರ್ಥಿಕವಾಗಿ ಉತ್ತಮ ನಿರ್ವಹಣೆ ತೋರಿದ ಬಗ್ಗೆ ನೀಡುವ ಜಾಹೀರಾತುಗಳಿಗೆ ಮರುಳಾಗಬೇಡಿ.
- × ಸುದ್ದಿ ಮಾಧ್ಯಮಗಳಲ್ಲಿ ಬರುವ ಕಂಪೆನಿಗಳ ಬೆಳವಣಿಗೆಗಳ ಬಗೆಗಿನ ವರದಿಗಳಿಗೆ ಮರುಳಾಗಬೇಡಿ. ಇವೆಲ್ಲಾ ನಿಮ್ಮನ್ನು ದಾರಿ ತಪ್ಪಿಸುವುದು.
- × ನಿಮ್ಮ ಹೂಡಿಕೆಯನ್ನು ದಿನಾಂಕ ನಮೂದಿಸಿದ ಚೆಕ್‌ಗಳ ಮರಳಿಸಲು ನೀಡುವ ಖಾತರಿಯನ್ನು ನಂಬಬೇಡಿ
- × ಸಮಸ್ಯೆ/ಸಂಶಯ ನಿವಾರಣೆಗೆ ಸಂಬಂಧಪಟ್ಟವರನ್ನು ಸಂಪರ್ಕಿಸಲು ಮರೆಯಬೇಡಿರಿ.
- × ನಿಮ್ಮ ಡಿಮಾಟ್ ಖಾತೆಯ ಖಾಲಿ ಡೆಲಿವರಿ ಇನ್‌ಸ್ಟ್ರಕ್ಷನ್ ಸ್ಲಿಪ್(ಡಿಐಎಸ್)ಗೆ ಸಹಿಮಾಡಿ ಮುಕ್ತವಾಗಿ ಬಿಟ್ಟುಹೋಬೇಡಿ.
- × ಖಾಲಿ ಡೆಲಿವರಿ ಇನ್‌ಸ್ಟ್ರಕ್ಷನ್ ಸ್ಲಿಪ್(ಡಿಐಎಸ್)ಗೆ ಸಹಿಮಾಡಿ ಡಿಪಿಗೋ, ನಿಮ್ಮ ಬ್ರೋಕರ್‌ಗೋ ಕೊಡಬೇಡಿ

## ಬ್ರೋಕರ್ ಮತ್ತು ಸಬ್ ಬ್ರೋಕರ್‌ಗಳೊಂದಿಗೆ ವ್ಯವಹಾರ ಮಾಡುವುದು

***ಬೇಕಾದವುಗಳು***

- ✓ ಸೆಬಿಯಲ್ಲಿ ನೋಂದಾಯಿತ ಬ್ರೋಕರ್/ಸಬ್ ಬ್ರೋಕರ್‌ಗಳೊಂದಿಗೆ ಮಾತ್ರ ವ್ಯವಹಾರ ಮಾಡಿರಿ. ಅವರಲ್ಲಿ ಸೆಬಿ ನೊಂದಣಿಯ ಪ್ರಮಾಣ ಪತ್ರ ಇದೆಯಾಂತ ಪರಿಶೀಲಿಸಿರಿ.
- ✓ ನಿಮ್ಮ ಪರವಾಗಿ ಯಾರು ಸೂಚನೆ ನೀಡುತ್ತಾರೆಂದು ಸ್ಪಷ್ಟವಾಗಿ ಹೇಳಿ, ಬ್ರೋಕರ್‌ಗೆ ಸ್ಪಷ್ಟವಾದ, ಮುಕ್ತವಾದ ಸೂಚನೆಗಳನ್ನು ನೀಡಿರಿ.
- ✓ ಬ್ರೋಕರ್‌ನಿಂದ ಕ್ಲಯಂಟ್ ರಿಜಿಸ್ಟ್ರೇಶನ್ ಫಾರ್ಮ್ ಸಹಿ ಮಾಡಿದ ನಂತರವೇ ವ್ಯವಹಾರ ಅರಂಭಿಸಿರಿ.
- ✓ ಬ್ರೋಕರ್/ಸಬ್ ಬ್ರೋಕರ್‌ನೊಂದಿಗೆ ಎಲ್ಲಾ ವಿಷಯಗಳನ್ನು ಒಳಗೊಂಡ ಒಪ್ಪಂದ ಮಾಡಿದ ನಂತರ ವ್ಯವಹಾರ ಮಾಡಿರಿ.
- ✓ ಒಪ್ಪಂದ ಪತ್ರವನ್ನು ಮತ್ತು ಕಷ್ಟ ನಷ್ಟ ವಿವರಿಸುವ ಪತ್ರವನ್ನು ಸಹಿಮಾಡುವ ಮೊದಲು ಗಮನವಿಟ್ಟು ಓದಿರಿ.
- ✓ ಒಪ್ಪಂದದ ಎಲ್ಲಾ ಪುಟಗಳಲ್ಲೂ ಸಹಿ ಮಾಡಿದ್ದೀರೆಂದು ಖಾತರಿ ಪಡಿಸಿ. ಬ್ರೋಕರ್ ಅಥವಾ ಅಧಿಕೃತ ವ್ಯಕ್ತಿ ಕೂಡಾ ಎಲ್ಲಾ ಪುಟಗಳಲ್ಲಿ ಸಹಿ ಮಾಡುತ್ತಾನೆಂದು ಖಾತರಿ ಪಡಿಸಿರಿ. ಒಪ್ಪಂದಕ್ಕೆ ಸಾಕ್ಷಿಯು ಹೆಸರು ಮತ್ತು ವಿಳಾಸದೊಂದಿಗೆ ಸಹಿ ಮಾಡುತ್ತಾನೆಂದು ಖಾತರಿ ಪಡಿಸಿಕೊಳ್ಳಿ.
- ✓ ಟ್ರೇಡ್‌ನಡೆದ 24 ತಾಸಿನೊಳಗೆ ಸಿಂಧುವಾದ ಕಾಂಟ್ರಾಕ್ಟ್ ನೋಟ್, ಕನ್ಫೀರ್ಮೇಶನ್ ಮೆಮೋ ಪಡೆಯಲು ಮರೆಯದಿರಿ.
- ✓ ನೀವು ಕಾಂಟ್ರಾಕ್ಟ್ ನೋಟ್/ ಕನ್ಫೀರ್ಮೇಶನ್ ಮೆಮೋ ದ ಅಸಲು ಪ್ರತಿಗಳನ್ನು ಪಡೆಯುವಾಗ ಬ್ರೋಕರ್‌ನ ಬಳಿ ಇರುವ ನಕಲು ಪ್ರತಿಗೆ ಸಹಿ ಮಾಡಲು ಮರೆಯದಿರಿ.
- ✓ ಪ್ರತಿಯೊಂದು ಪಾವತಿಗೂ ಬಿಲ್ಲು ಕೇಳಿ ಪಡೆಯಿರಿ.
- ✓ ಬ್ರೋಕರ್‌ನ ಹೆಸರು, ವ್ಯವಹಾರ ಮಾಡಿದ ವೇಳೆ ಮತ್ತು ನಂಬ್ರ, ಮಾರಾಟ ಬೆಲೆ ಮತ್ತು ಬ್ರೋಕರೇಜ್ ಇವುಗಳು ಕಾಂಟ್ರಾಕ್ಟ್ ನೋಟ್‌ನಲ್ಲಿ ದಾಖಲಾಗಿವೆಯೋ ಎಂದು ನೋಡಿರಿ.
- ✓ ಕಾಲಾನುಚಿತವಾಗಿ ಪಾವತಿ ಮಾಡಿ ವ್ಯವಹಾರ ಮುಗಿಸುವುದನ್ನು ಮರೆಯಬೇಡಿ.
- ✓ ಚೆಕ್/ಡ್ರಾಫ್ಟ್‌ಗಳನ್ನು ಬ್ರೋಕರ್‌ನ ಟ್ರೇಡ್‌ನೇಮ್‌ನಲ್ಲಿ ನೀಡಿರಿ.
- ✓ ಪೇಮೆಂಟ್ ಮಾಡಿದ 48 ಗಂಟೆಯೊಳಗೆ ರಸಿಪ್ಟ್ ಆಫ್ ಪೇಯ್‌ಮೆಂಟ್/ಡೆಲಿವರಿ ಮಾಡಲು ಮರೆಯಬಾರದು.
- ✓ ಸಮಸ್ಯೆಗಳಿದ್ದರೆ ಲಿಖಿತವಾಗಿ ದೂರನ್ನು ಇಂಟರ್‌ಮೀಡಿಯರಿ/ಸ್ಟೋಕ್ ಎಕ್ಸೇಂಜ್/ಸೆಬಿಗೆ ಆದಷ್ಟೂ ಶೀಘ್ರದಲ್ಲಿ ಸಲ್ಲಿಸಿ.
- ✓ ಸಬ್ ಬ್ರೋಕರ್‌ನೊಂದಿಗೆ ಏನಾದರೂ ಸಮಸ್ಯೆ ಉಂಟಾದಲ್ಲಿ ಪ್ರಧಾನ ಬ್ರೋಕರ್‌ಗೆ ಕೂಡಲೇ ದೂರು ನೀಡಿ.
- ✓ ಸ್ಟೋಕ್ ಎಕ್ಸೇಂಜ್/ಸೆಬಿ ಪ್ರಕಟಿಸುವ ಕಾಯಿದೆ ಕಾನೂನುಗಳು, ಸೂಚನೆಗಳು, ಸುತ್ತೋಲೆಗಳನ್ನು ಓದಿರಿ.
- ✓ ಡಿಮಾಟ್ ಖಾತೆಯಲ್ಲಿ ನಿಮ್ಮ ಪೋರ್ಟ್‌ಫೋಲಿಯೋ ಬದಲಾವಣೆಯನ್ನು ದಾಖಲಿಸಿಕೊಳ್ಳಿರಿ.
- ✓ ಪಡಕೊಳ್ಳುವ ಮೊದಲು ನಿಮ್ಮ ಬಳಿ ಹಣ ಇದೆ ಎಂದು ಖಾತರಿ ಮಾಡಿಕೊಳ್ಳಿರಿ.
- ✓ ನೀವು ಮಾರಾಟ ಮಾಡುವ ಮೊದಲು ಸೆಕ್ಯುರಿಟೀಸ್ ನಿಮ್ಮ ಬಳಿಯಲ್ಲೇ ಇದೆ ಎಂದು ಖಾತರಿಮಾಡಿರಿ

***ಬೇಡದವುಗಳು***

- × ಅಂಗೀಕಾರ ಇಲ್ಲದ ಬ್ರೋಕರ್‌ಗಳೊಂದಿಗೆ/ಸಬ್ ಬ್ರೋಕರ್‌ಗಳೊಂದಿಗೆ ಅಥವಾ ಮಧ್ಯವರ್ತಿಗಳೊಂದಿಗೆ ವ್ಯವಹಾರ ಮಾಡಬೇಡಿ.
- × ರೀತಿ ನಿಮಯಗಳನ್ನು ಓದಿ ತಿಳಿಯದೇ ಯಾರೊಂದಿಗೂ ಯಾವುದೇ ಒಪ್ಪಂದದಲ್ಲಿ ಏರ್ಪಡಬೇಡಿ.
- × ನಿಮ್ಮ ಡಿಮಾಟ್ ಟ್ರಾನ್ಸಾಕ್ಷನ್ ಸ್ಲಿಪ್‌ನ್ನು ಯಾವ ಬ್ರೋಕರ್/ಸಬ್ ಬ್ರೋಕರ್‌ಬಳಿಯಲ್ಲೂ ಇರಿಸಬೇಡಿ.
- × ನಿಮ್ಮ ಆಪ್ತ ಬ್ರೋಕರ್/ಸಬ್ ಬ್ರೋಕರ್ ಬಳಿಯಲ್ಲೂ ಕೂಡಾ ವ್ಯವಹಾರಗಳ ಪ್ರಮಾಣ ಪತ್ರ ಮೊದಲಾದವುಗಳನ್ನು ಇರಿಸಬೇಡಿ.

# ಮ್ಯೂಚ್ಯುವಲ್ ಫಂಡ್

***ಬೇಕಾದವುಗಳು***

- ✓ ಹೂಡಿಕೆ ಮಾಡುವ ಮೊದಲು ಮಾಹಿತಿ ಪತ್ರವನ್ನು ಗಮನ ಕೊಟ್ಟು ಓದಿರಿ.
- ✓ ಮ್ಯೂಚ್ಯುವಲ್ ಫಂಡ್‌ಗಳಲ್ಲಿ ಹೂಡಿಕೆ ಮಾಡುವುದು ಸಾಹಸದ ಕೆಲಸ, ಯಾವಾಗಲೂ ಲಾಭವೇ ಬರಬೇಕೆಂದೇನೂ ಇಲ್ಲ.
- ✓ ಕಷ್ಟ ನಷ್ಟಗಳನ್ನು ಭರಿಸುವ ಸಾಮರ್ಥ್ಯಕ್ಕೆ ಅನುಸಾರವಾಗಿ ಮತ್ತು ಉದ್ದೇಶಗಳಿಗೆ ಅನುಸಾರವಾಗಿ ಹೂಡಿಕೆ ಮಾಡಿರಿ.
- ✓ ಒಂದು ಸ್ಕೀಂ ಅಥವಾ ಫಂಡ್ ಮೊದಲು ಉತ್ತಮ ನಿರ್ವಹಣೆ ತೋರಿದೆ ಎಂದು ಮುಂದೇ ಭವಿಷ್ಯದಲ್ಲೂ ಅದೇ ಫಲಿತಾಂಶ ಬರಬೇಕೆಂದೇನೂ ಇಲ್ಲ. ಭೂತಕಾಲದ ನಿರ್ವಹಣೆ ಪುನರಾವರ್ತನೆ ಆಗಲೂ, ಆಗದಿರಲೂ ಸಾಧ್ಯತೆ ಇದೆ.
- ✓ ನೀವು ಹೂಡಿಕೆ ಮಾಡಿದ ಸ್ಕೀಂನ ಎನ್‌ಎವಿಯನ್ನು ಗಮನಿಸುತ್ತಾ ಇರಿ.
- ✓ ನಿಮ್ಮ ಹೂಡಿಕೆಗೆ ಮತ್ತು ಮರಳಿಕೆಗೆ ಅಕೌಂಟ್ ಸ್ಟೇಟ್‌ಮೆಂಟ್ ಪಡಕೊಳ್ಳಿರಿ.

***ಬೇಡದವುಗಳು***

- × ನಿಮಗೆ ಕಮಿಷನ್, ಯಾವುದಾದರೂ ಸೌಲಭ್ಯ ದೊರಕುತ್ತದೆ ಎಂದು ಸ್ಕೀಮ್ ಒಂದರಲ್ಲಿ ಹೂಡಿಕೆ ಮಾಡಬೇಡಿ.
- × ಮ್ಯೂಚ್ಯುವಲ್ ಫಂಡ್/ಸ್ಕೀಂ ನ ಹೆಸರಿಗೆ ಆಕರ್ಷಿತರಾಗಬೇಡಿ.
- × ಫಂಡ್/ಸ್ಕೀಂ ಮೊದಲು ಲಾಭ ತಂದಿದೆ ಎಂದು ವಿವೇಚನೆ ಇಲ್ಲದೆ ಹೂಡಿಕೆಮಾಡಿ ಮುಂದೆಯೂ ಅದೇ ರೀತಿ ಲಾಭ ತರಬಹುದೆಂದು ಹಗಲುಕನಸು ಕಾಣಬೇಡಿ.
- × ಇದರಲ್ಲಿ ಒಳಗೊಂಡ ಕಷ್ಟ ನಷ್ಟಗಳನ್ನು ಗಮನಿಸಿ
- × ನಿಮ್ಮ ಸಂಶಯಗಳನ್ನು/ದೂರುಗಳನ್ನು ಸಂಬಂಧಪಟ್ಟ ಪ್ರಾಧಿಕಾರಕ್ಕೆ ಸಲ್ಲಿಸಿ.
- × ಎಎಂಎಫ್‌ಐಯಲ್ಲಿ ನೋಂದಾಯಿತರಲ್ಲದ ಏಜೆಂಟ್/ಬ್ರೋಕರಲ್ಲಿ ವ್ಯವಹಾರ ಮಾಡಬೇಡಿ.

# ಬಯ್‌ಬ್ಯಾಕ್

***ಬೇಕಾದವುಗಳು***

- ✓ ನಿರ್ಧಾರಿತ ಬಯ್‌ಬ್ಯಾಕ್ ಬಗ್ಗೆ ಇರುವ ವಿಶೇಷ ನಿರ್ಣಯನ್ನು ಪೂರ್ಣವಾಗಿ ಓದಿ ಅನಂತರ ತೀರ್ಮಾನ ಕೈಗೊಳ್ಳಿ.
- ✓ ಬಯ್‌ಬ್ಯಾಕ್‌ನಲ್ಲಿ ಸೂಚಿಸಿದ ಬೆಲೆಯನ್ನು ಹಿಂದಿನ ಕೆಲವು ತಿಂಗಳುಗಳ ಮಾರುಕಟ್ಟೆ ದರದೊಂದಿಗೆ ಹೋಲಿಸಿ ನೋಡಿರಿ. ಪ್ರತಿ ಷೇರ್‌ಗೆ ಕಂಪೆನಿಯ ಆದಾಯ, ಬುಕ್ ವಾಲ್ಯೂ ಮೊದಲಾದುವನ್ನು ಪರಿಶೀಲಿಸಿ. ಅನಂತರ ನಮೂದಿಸಿದ ಬೆಲೆ ಹೆಚ್ಚೋ, ಕಡಿಮೆಯೋ ಎಂದು ನಿರ್ಧರಿಸಿ.
- ✓ ಸೂಚನೆಗಳನ್ನು ಓದಿ ಷೇರುಗಳ ವಿಲೇವಾರಿಗೆ ಸಂಬಂಧಿಸಿದ ಅರ್ಜಿಯನ್ನು ಸಿದ್ಧಪಡಿಸಿ.
- ✓ ನಿಮ್ಮ ಅರ್ಜಿ ನಿಗದಿತ ವೇಳೆಯಲ್ಲಿ ಸಂಬಂಧಪಟ್ಟ ಸಂಗ್ರಹಣಾ ಕೇಂದ್ರಕ್ಕೆ ತಲುಪುತ್ತದೆ ಎಂದು ಖಾತರಿ ಪಡಿಸಿ.
- ✓ ಅಗತ್ಯ ಇರುವ ಎಲ್ಲಾ ದಾಖಲೆ ಪತ್ರಗಳನ್ನು ಸಲ್ಲಿಸಿ.
- ✓ ನಿಮಗೆ ದೊರಕಿದ ಪತ್ರದಲ್ಲಿ ಸೂಚಿಸಿದಂತೆ ಅರ್ಜಿಯನ್ನು ಅರ್ಜಿಯನ್ನು ಕಳುಹಿಸಿ(ಅಂಚೆ/ಕೊರಿಯರ್/ಕೊಂಡುಹೋಗಿ ಕೊಡುವುದು/ಸಾಮಾನ್ಯ ಅಂಚೆ ಮೊದಲಾದವುಗಳು).
- ✓ ಈ ಬಗ್ಗೆ ಯಾವುದೇ ಪ್ರತಿಕ್ರಿಯೆ ದೊರಕದಿದ್ದರೆ ಮರ್ಚಂಟ್ ಬ್ಯಾಂಕರನ್ನು ಸಂಪರ್ಕಿಸಿ.
- ✓ ಏನಾದರೂ ಅಹವಾಲುಗಳಿದ್ದರೆ ಪತ್ರದಲ್ಲಿ ಸೂಚಿಸಿದ ಕಂಪ್ಲಿಯನ್ಸ್ ಆಫೀಸರನ್ನು ಸಂಪರ್ಕಿಸಿ.
- ✓ ಕಂಪೆನಿ ಕಾಯಿದೆಯನ್ನು ಉಲ್ಲಂಘಿಸಿದರೆ ರಿಜಿಸ್ಟ್ರಾರ್ ಆಫ್ ಕಂಪೆನೀಸ್ ಇವರಿಗೆ ಮಾಹಿತಿ ನೀಡಿರಿ.

***ಬೇಡದವುಗಳು***

- × ಒಂದಕ್ಕಿಂತ ಅರ್ಜಿಗಳನ್ನು ಸಲ್ಲಿಸಬೇಡಿ.
- × ಸರಿಯಾದ ರೀತಿಲ್ಲಿ ಅರ್ಜಿಯನ್ನು ಭರ್ತಿಮಾಡಿ.
- × ಅರ್ಜಿಯನ್ನು ವಿರೂಪ ಮಾಡಬೇಡಿ.
- × ತಪ್ಪು ವಿಳಾಸಕ್ಕೆ ಅರ್ಜಿ ಕಳುಹಿಸಬೇಡಿ.
- × ನಿಗದಿತ ದಿನಾಂಕದ ನಂತರ ಅರ್ಜಿ ಸಲ್ಲಿಸಬೇಡಿ.
- × ಅರ್ಜಿಯಲ್ಲಿ ಸರಿಯಾದ ಮಾಹಿತಿ ನೀಡಿ
- × ಅರ್ಜಿಯಲ್ಲಿ ಸಹಿ ಮಾಡಲು ಮರೆಯಬೇಡಿ
- × ಅರ್ಜಿಯಲ್ಲಿ ತಪ್ಪಾದ, ಪರಸ್ಪರ ಪೂರಕವಲ್ಲದ ಮಾಹಿತಿ ನೀಡಬೇಡಿ.

## ಮುಕ್ತ ಆಫರ್‌ಗಳು (ಟೇಕ್‌ಓವರ್ ರೆಗುಲೇಶನ್‌ಗೆ ಅನುಸಾರವಾಗಿ)

***ಬೇಕಾದವುಗಳು***

- ✓ ಆಫರ್‌ನ್ನು ಸ್ವೀಕರಿಸುವ ಮೊದಲು ಎಲ್ಲಾ ಸ್ಪರ್ಧಾತ್ಮಕ ಆಫರ್‌ಗಳ ಬಗ್ಗೆ, ದರ ಮತ್ತು ಆಫರ್‌ಗಳ ಮರು ಪರಿಶೀಲನೆ ಬಗ್ಗೆ ತಿಳಿದಿರಬೇಕು.
- ✓ ಸ್ಪರ್ಧಾತ್ಮಕ ಆಫರ್‌ಗಳ ಮತ್ತು ಆಫರ್‌ಗಳ ಮರು ಪರಿಶೀಲನೆ ಬಗ್ಗೆ ರಾಷ್ಟ್ರಮಟ್ಟದ ಪತ್ರಿಕೆಗಳು/ ಸೆಬಿಯ ವೆಬ್‌ಸೈಟ್‌ನಿಂದ ಪಡೆದು ಪರಿಶೀಲಿಸಬೇಕು.
- ✓ ನೀಡಲಾದ ಆಫರ್‌ನಿಂದ ಕಂಪೆನಿಯ ಡಿಲಿಸ್ಟ್‌ಗೆ ಕಾರಣವಾಗಬಹುದೋ ಎಂದು ನೋಡಿ.
- ✓ ಡಿಮ್ಯಾಟ್ ಷೇರ್‌ಗಳ ವಿಚಾರದಲ್ಲಿ ಆಫರ್ ಮುಕ್ತಾಯವಾಗುವ ಮೊದಲು ಕ್ರೆಡಿಟ್ ವಿಶೇಷ ಡೆಪೋಸಿಟರಿ ಖಾತೆಗೆ ಜಮಾ ಆಗುವುದೆಂದು ವಿಚಾರಿಸಿ.
- ✓ ಆಫರ್ ಪತ್ರದಲ್ಲಿ ಪ್ರಮಾಣ ಪತ್ರಗಳನ್ನು ಕೊಂಡು ಹೋಗಿ ಸಲ್ಲಿಸಲು ಬೇಕಾದ ದಿನಾಂಕ ಮತ್ತು ವೇಳೆಯನ್ನು ಗಮನಿಸಿ.
- ✓ ನಿಮ್ಮ ಸ್ವೀಕೃತಿ ನೀಡಲು ಆಫರ್ ಮರುಪರಿಶೀಲಿಸುವ ಕೊನೆಯ ದಿನಾಂಕದ ತನಕ ಕಾಯಿರಿ ಅಂದರೆ ಆಫರ್ ಮುಕ್ತಾಯವಾಗುವ 7 ಕಚೇರಿ ದಿನಗಳ ಮೊದಲು,
- ✓ ನೀವು ಟೆಂಡರ್ ಮಾಡಿದ ಷೇರನ್ನು ಹಿಂತೆಗೆಯುತ್ತಿದ್ದರೆ ನಿಗದಿತ ಕೇಂದ್ರಕ್ಕೆ ಆಫರ್ ಮುಗಿಯುವ 3 ಕಚೇರಿ ದಿನಗಳ ಮೊದಲು ಹಿಂತೆಗೆಯುವುದನ್ನು ಸೂಚಿಸುವ ಫಾರ್ಮನ್ನು ಆಫರ್ ಲೆಟರ್‌ನೊಂದಿಗೆ ಸಲ್ಲಿಸಬೇಕು
- ✓ ಫಾರ್ಮ್ ಆಫ್ ಅಸೆಪ್ಟನ್ಸ್, ಟ್ರಾನ್ಸ್‌ಫರ್ ಡೀಡ್, ಡಿಪೋಸಿಟರಿ ಇನ್‌ಸ್ಟ್ರಕ್ಷನ್, ಫಾರ್ಮ್ ಆಫ್ ವಿತ್‌ಡ್ರಾವಲ್‌ನಲ್ಲಿ ನಿಮ್ಮ ಸಹಿ ಒಂದೇ ರೀತಿ ಇರಲಿ ಮತ್ತು ಕಂಪೆನಿಗೆ ಸಲ್ಲಿಸಿದ ಕ್ರಮದಲ್ಲೇ ಇರಲಿ.
- ✓ ಆಫರ್ ಪತ್ರ ಸಿಗದಿದ್ದರೆ ಹಿಂತೆಯಲು ಅಥವಾ ಟೆಂಡರ್ ಮಾಡಲು ನೀವು ಬಿಳಿ ಕಾಗದಲ್ಲಿ ಅರ್ಜಿ ಬರೆದು, ಕಾರಣ ನಮೂದಿಸಿ ಸಲ್ಲಿಸಿದರೆ ಸಾಕು.

***ಬೇಡದವುಗಳು***

- ✗ ನಿಮ್ಮ ಸ್ವೀಕೃತಿ ತಿಳಿಸಲು ಆಫರ್ ಮುಕ್ತಾಯದ ಕೊನೆಯ ದಿನದ ತನಕ ಕಾಯದಿರಿ
- ✗ ಪಡಕೊಳ್ಳುವವರ, ವರ್ಗಾಯಿಸುವವರ ಮಾಹಿತಿಯನ್ನು ಟ್ರಾನ್ಸ್‌ಫರ್ ಡೀಡ್‌ನಲ್ಲಿ ನಮೂದಿಸಬೇಡಿ.
- ✗ ಪೂರ್ಣವಾಗಿ ಭರ್ತಿ ಮಾಡದ ಅರ್ಜಿಗಳನ್ನು, ಸೂಕ್ತವಲ್ಲದ ಪ್ರಮಾಣ ಪತ್ರಗಳನ್ನು ಸಲ್ಲಿಸಬೇಡಿ.

## ಕಲೆಕ್ಟಿವ್ ಇನ್‌ವೆಸ್ಟ್‌ಮೆಂಟ್ ಸ್ಕೀಂಗಳು

***ಬೇಕಾದವುಗಳು***

- ✓ ಸೆಬಿಯಲ್ಲಿ ನೊಂದಾಯಿತವಾಗಿದೆ ಎಂದು ಖಚಿತ ಪಡಿಸಿ.
- ✓ ಆಫರ್ ಪತ್ರವನ್ನು ಓದಿ.
- ✓ ಸ್ಕೀಂ ಬಗೆಗಿನ ವಿಸ್ತೃತ ವರದಿ ಓದಿ.
- ✓ ಪ್ರೋಜೆಕ್ಟ್ ಸಮರ್ಪಕಔಆಗಿದೆಯೋ ಎಂದು ನೋಡಿ.
- ✓ ಪ್ರಮೋಟರ್ಸ್‌ಗಳ ಹಿನ್ನೆಲೆ/ ಸಾಮರ್ಥ್ಯಗಳ ಬಗ್ಗೆ ತಿಳಿಯಿರಿ.
- ✓ ಸೊತ್ತು ಮತ್ತು ಅಸೆಟ್‌ಗಳ ಮಾರುಕಟ್ಟೆ ಮೌಲ್ಯವನ್ನು ನೋಡಿ.
- ✓ ಕಲೆಕ್ಟಿವ್ ಇನ್‌ವೆಸ್ಟ್‌ಮೆಂಟ್ ಮೆನೇಜ್‌ಮೆಂಟ್ ಕಂಪೆನಿ (ಸಿಐಎಂಸಿ) ಅನುಷ್ಠಾನಕ್ಕೆ ಅಗತ್ಯ ಇರುವ ಸಂಪನ್ಮೂಲ ಹೊಂದಿದೆಯೋ ಎಂದು ನೋಡಿರಿ.
- ✓ ಕ್ರಡಿಟ್ ರೇಟಿಂಗ್/ಕಾಲಾವಧಿಯನ್ನು ಪರಿಶೀಲಿಸಿ.
- ✓ ಈ ಹಿಂದಿನ ಸ್ಕೀಂಗಳ ಹೇಳಿಕೆ ಮತ್ತು ನಿರ್ವಹಣೆ ಮೊದಲಾದವುಗಳನ್ನು ಪರಿಶೀಲಿಸಿ.
- ✓ ಪ್ರತಿ ಆರ್ಥಿಕ ವರ್ಷ ಮುಗಿದ ಎರಡು ತಿಂಗಳೊಳಗೆ ಸಿಐಎಂಸಿ ವಾರ್ಷಿಕ ವರದಿಯ ಪ್ರತಿಯನ್ನು ನಿಮಗೆ ನೀಡುತ್ತದೆಯೋ ಎಮದು ನೋಡಿರಿ.
- ✓ ಸೆಬಿ ಯಾವುದೇ ರೀತಿಯ ಭರವಸೆ ನೀಡುವುದಿಲ್ಲ ಎಂಬುದನ್ನು ಗಮನಿಸಿ

***ಬೇಡದವುಗಳು***

- ✗ ಸೆಬಿಯಲ್ಲಿ ನೋಂದಾಯಿತ ವಲ್ಲದ ಸಿಐಎಸ್‌ನಲ್ಲಿ ಹೂಡಿಕೆ ಮಾಡಬೇಡಿ.
- ✗ ಜಾಹಿರಾರು, ವದಂತಿಗಳಿಗೆ ಮಾರುಹೋಗಬೇಡಿ

# ಡೆರಿವೇಟಿವ್ಸ್

## ಬೇಕಾದವುಗಳು

- ✓ ಕಾಯಿದೆ, ಕಾನೂನು, ಬೈಲಾ, ಎಕ್ಸ್‌ಚೇಂಜ್‌ನ ಘೋಷಣೆಗಳನ್ನು ತಿಳಿಯಿರಿ.
- ✓ ಸೆಬಿಯಲ್ಲಿ ನೊಂದಾಯಿತ ಟ್ರೇಡಿಂಗ್ ಮೆಂಬರ್(ಟಿ.ಎಂ), ಸೆಬಿಯಲ್ಲಿ ನೊಂದಾಯಿತ ಟಿಎಂನ ಅಧಿಕೃತ ವ್ಯಕ್ತಿಯೊಂದಿಗೆ ಮಾತ್ರ ವ್ಯವಹಾರ ಮಾಡಿರಿ.
- ✓ ಅಧಿಕೃತ ವ್ಯಕ್ತಿಯೊಂದಿಗೆ ವ್ಯವಹಾರ ಮಾಡುವಾಗ ಕಾಂಟ್ರಾಕ್ಟ್ ನೋಟ್ ಟಿಎಂ ಅಥವಾ ಅಧಿಕೃತ ವ್ಯಕ್ತಿಯದ್ದೇ ಎಂದು ಪರಿಶೀಲಿಸಿ.
- ✓ ಬ್ರೋಕರೇಜ್/ಪಾವತಿಗಳು/ಮಾರ್ಜಿನ್‌ಗಳನ್ನು ಟಿಎಂಗೆ ಸಲ್ಲಿಸಿ.
- ✓ ಪ್ರತಿ ವ್ಯವಹಾರಕ್ಕೂ ಟಿಎಂನಿಂದ ಸಹಿಮಾಡಿದ ಕಾಂಟ್ರಾಕ್ಟ್ ನೋಟ್ ಪಡಕೊಳ್ಳಿ
- ✓ ಟಿಎಂನಲ್ಲಿ ಮಾರ್ಜಿನ್‌ಗಾಗಿ ಕೊಲಾಟರಲ್ ಡೆಪೋಸಿಟ್‌ಮಾಡಿದುದಕ್ಕೆ ರಸೀದಿ ಪಡಕೊಳ್ಳಿ.
- ✓ ಕ್ಲಯಂಟ್–ಟಿಎಂ ಒಪ್ಪಂದದ ಹೆಚ್ಚಿನ ಮಾಹಿತಿ ಪಡಕೊಳ್ಳಿ
- ✓ ಟಿಎಂ ಹಾಗೂ ನಿಮ್ಮ ಹಕ್ಕುಗಳನ್ನು ಹಾಗೂ ಕರ್ತವ್ಯಗಳನ್ನು ತಿಳಿದುಕೊಳ್ಳಿ.
- ✓ ಮಾರ್ಜಿನ್ ಕಾಲ್/ಮಾರುಕಟ್ಟೆಯಲ್ಲಿ ನಿಮ್ಮ ನಿಲುವಿನ ಮೇಲೆ ಸಂಭವಿಸಬಹುದಾದ ಕಷ್ಟಕಾರ್ಪಣ್ಯಗಳ ಬಗ್ಗೆ ಅರಿವುಳ್ಳವರಾಗಿ.
- ✓ ಭವಿಷ್ಯದ ಸ್ಥಾನಕ್ಕಾಗಿ ಮಾರ್ಕೆಟ್ ಮಾರ್ಜಿನ್‌ಗಳನ್ನು ಟಿಎಂನಿಂದ/ಟಿಂಎಂಗೆ ದಿನಂತ್ರತಿ ಸಂಗ್ರಹಿಸಿ/ನೀಡಿ

### ಬೇಡದವುಗಳು

- × ಒಂದು ವ್ಯವಹಾರ ಆರಂಭಿಸುವ ಮೊದಲು ರಿಸ್ಕ್ ಡಿಸ್ಕ್ಲೋಸ್ಲರ್ ವಿಚಾರ ಓದಿ ತಿಳಿದುಕೊಳ್ಳಿ.
- × ಕಷ್ಟ ನಷ್ಟಗಳನ್ನು ತಿಳಿಯದೇ ಯಾವುದೇ ವ್ಯವಹಾರಕ್ಕೆ ಕೈ ಹಾಕಬೇಡಿ.

# ಪಡಕೊಳ್ಳುವ ರೀತಿ

**ಎಲ್ಲಿಂದ ಪಡಕೊಳ್ಳಬೇಕು**

- ಬ್ರೋಕರ್‌ಗಳು : ಇಕ್ವಿಟಿಗಳ ಮಾರಾಟ/ಪಡಕೊಳ್ಳುವುದು, ಡೆಬ್ಟ್ ಮತ್ತು ಡೆರಿವೇಟಿವ್‌ಗಳು, ಮ್ಯೂಚುವಲ್ ಫಂಡ್‌ಗಳು, ಐಪಿಒಗಳನ್ನು ಬ್ರೋಕರ್‌ಗಳು ವ್ಯವಹಾರ ಮಾಡುತ್ತಾರೆ.
- ಬ್ಯಾಂಕುಗಳು : ಇಕ್ವಿಟಿಗಳ ಮಾರಾಟ/ಪಡಕೊಳ್ಳುವುದು, ಡೆಬ್ಟ್ ಮತ್ತು ಡೆರಿವೇಟಿವ್‌ಗಳು, ಮ್ಯೂಚುವಲ್ ಫಂಡ್‌ಗಳು, ಐಪಿಒಗಳನ್ನು ಬ್ಯಾಂಕುಗಳು ವ್ಯವಹಾರ ಮಾಡುತ್ತಾರೆ. ಸೇವೆಯನ್ನು ಮುಖತಃ ಅಥವಾ ವೆಬ್‌ಸೈಟ್‌ಮೂಲಕ ಪಡಕೊಳ್ಳಬಹುದು.
- ಮ್ಯೂಚ್ಯುವಲ್ ಫಂಡ್‌ಗಳು : ಎಲ್ಲಾ ಮ್ಯೂಚ್ಯುವಲ್ ಫಂಡ್‌ಗಳು ಆನ್‌ಲೈನ್, ಮುಖತಃ ವ್ಯವಹಾರಕ್ಕೆ ಸೌಕರ್ಯ ನೀಡುತ್ತವೆ.
- ಸ್ಟಾಕ್ ಎಕ್ಸ್ಚೇಂಜ್ : ಕ್ಲೋಸ್ ಎಂಡಾದ ಮ್ಯೂಚ್ಯುವಲ್ ಫಂಡ್‌ಗಳನ್ನು ಬ್ರೋಕರ್‌ಗಳ ಮೂಲಕ ಸ್ಟಾಕ್ ಎಕ್ಸ್ಚೇಂಜ್ ನಿಂದ ಪಡಕೊಳ್ಳಬಹುದು. ಓಪನ್‌ಎಂಡಾದ ಮ್ಯೂಚ್ಯುವಲ್ ಫಂಡ್‌ಗಳನ್ನೂ ಇದೇ ರೀತಿ ವ್ಯವಹಾರ ಮಾಡಬಹುದು.

**ಕೇಪಿಟಲ್ ಮಾರ್ಕೆಟ್‌ನಲ್ಲಿ ಹೂಡಿಕೆದಾರರಾಗುವ ವಿವಿಧ ಹಂತಗಳು**

- ಪಾನ್ ಕಾರ್ಡ್ ಅತ್ಯಗತ್ಯ, ಇದು ಎಲ್ಲಾ ಹೂಡಿಕೆದಾರರ ಕೈವಶ ಇರಬೇಕು.
- ಬ್ಯಾಂಕ್ ಖಾತೆ, ಡಿಮಾಟ್ ಖಾತೆ ಆರಂಭಿಸಿರಬೇಕು. ಡಿಮಾಟ್ ಖಾತೆಯನ್ನು ಬ್ಯಾಂಕ್ ಖಾತೆಯೊಂದಿಗೆ ಜೋಡಿಸಿಡಬೇಕು, ಫಂಡ್ ಮತ್ತು ಸೆಕ್ಯುರಿಟಿಗೆ ನಗದು ಪಾವತಿಸಲು ಈ ಮೂಲಕ ಸಾಧ್ಯವಾಗುತ್ತದೆ.
- ಬ್ರೋಕರ್‌ನ್ನು ಆಯ್ಕೆಮಾಡಿ ಕೆವೈಸಿ ಫಾರ್ಮ್ ಭರ್ತಿ ಮಾಡಬೇಕು. ಅನಂತರ ಬ್ರೋಕರ್ –ಕ್ಲಯಂಟ್ ಒಪ್ಪಂದಕ್ಕೆ ಸೇರಬೇಕು.
- ಬ್ರೋಕರ್ ನಿಮಗೆ ಕ್ಲಯಂಟ್ ಐಡಿ ಕೊಡುತ್ತಾರೆ, ಇದು ನಿಮ್ಮನ್ನು ಗುರುತಿಸಲು ಸಹಕಾರಿ.
- ಈ ಹಂತ ದಾಟಿದ ನಂತರ ನೀವು ಸೆಕ್ಯುರಿಟಿ ಮಾರಾಟ ಮಾಡಲು, ಪಡಕೊಳ್ಳಲು ಸಿದ್ಧರಾಗುತ್ತೀರಿ.

# ಯಾವ ವಿಭಾಗವನ್ನು ಯಾರು  ನಿಯಂತ್ರಿಸುತ್ತಾರೆ

ಈ ಕೆಳಗಿನ ಕೊಡಲಾದ ಕೋಷ್ಟಕದಲ್ಲಿ ಹಣಕಾಸು ವಲಯದ ಕಂಪೆನಿಗಳ/ಇಂಟರ್‌ಮೀಡಿಯರಿಗಳ/ಸೇವೆಗಳನ್ನು ನೀಡುವವರ ಪಟ್ಟಿಯನ್ನು ಮೊದಲ ಕಾಲಂನಲ್ಲೂ ಅವನ್ನು ನಿಯಂತ್ರಿಸುವ ಏಜೆನ್ಸಿಗಳ ಪಟ್ಟಿಯನ್ನು ಎರಡನೇ ಕಾಲಂನಲ್ಲೂ ನೀಡಲಾಗಿದೆ.

| ವಿಭಾಗ | ನಿಯಂತ್ರಣ |
|---|---|
| ಆಡಿಟರ್ಸ್ | ಐಸಿಎಐ/ಸಿಎಜಿ |
| ಬ್ಯಾಂಕುಗಳು | ಆರ್‌ಬಿಐ |
| ಬ್ಯಾಂಕುಗಳು–ಇಶ್ಯೂ ಕಲೆಕ್ಷನ್ | ಸೆಬಿ |
| ಚಿಟ್ ಫಂಟ್ | ರೆಜಿಸ್ಟ್ರಾರ್ ಆಫ್ ಚಿಟ್ ಫಂಡ್ಸ್ |
| ಕಲೆಕ್ಟಿವ್ ಇನ್‌ವೆಸ್ಟ್‌ಮೆಂಟ್ ಸ್ಕೀಮ್ಸ್ | ಸೆಬಿ |
| ಎಲ್ಲಾ ಕಂಪೆನಿಗಳು | ಎಂಸಿಎ / ಆರ್‌ಒಸಿ |
| ಕಂಪೆನಿಗಳು–ಲಿಸ್ಟೆಡ್ | ಎಂಸಿಎ / ಆರ್‌ಒಸಿ / ಸೆಬಿ / ಎಸ್‌ಇ |
| ಕಂಪೆನಿ ಸೆಕ್ರೆಟರಿಗಳು | ಐಸಿಎಸ್‌ಐ |
| ಕೋ ಅಪರೇಟಿವ್ ಬ್ಯಾಂಕ್‌ಗಳು | ಆರ್‌ಬಿಐ |
| ಕೋಸ್ಟ್ ಅಕೌಂಟಂಟ್ಸ್ | ಐಸಿಡಬ್ಲ್ಯುಎಐ |
| ಕ್ರೆಡಿಟ್ ರೇಟಿಂಗ್ ಏಜೆನ್ಸೀಸ್ | ಸೆಬಿ |
| ಕಸ್ಟೋಡಿಯಲ್ ಸರ್ವೀಸಸ್ | ಸೆಬಿ |
| ಡಿಬೆಂಚರ್ ಟ್ರಸ್ಟೀಸ್ | ಸೆಬಿ |
| ಡಿಪೋಸಿಟರೀಸ್ | ಸೆಬಿ |
| ಡಿಪೋಸಿಟರೀಸ್ ಪಾರ್ಟಿಸಿಪಂಟ್ಸ್ | ಸೆಬಿ / ಎನ್‌ಎಸ್‌ಡಿಎಲ್ / ಸಿಡಿಎಸ್‌ಎಲ್ |
| ಫೋರಿನ್ ಇನ್‌ವೆಸ್ಟ್‌ಮೆಂಟ್ ಇನ್‌ಸ್ಟಿಟ್ಯೂಶನ್ಸ್ | ಸೆಬಿ |
| ಹೌಸಿಂಗ್ ಫಿನಾನ್ಸ್ ಕಂಪನೀಸ್ | ಎನ್‌ಎಚ್‌ಬಿ |
| ವಿಮಾ ಬ್ರೋಕರ್‌ಗಳು/ಏಜೆನ್ಸಿಗಳು | ಐಆರ್‌ಡಿಎ |
| ವಿಮಾ ಕಂಪೆನಿಗಳು | ಐಆರ್‌ಡಿಎ |
| ಹೂಡಿಕೆ ಬ್ಯಾಂಕರ್‌ಗಳು(ಮರ್ಚೆಂಟ್ ಬ್ಯಾಂಕರ್ಸ್) | ಸೆಬಿ |
| ಇನ್‌ವೆಸ್ಟರ್ ಅಸೋಸಿಯೇಶನ್ | ಸೆಬಿ |
| ಮಾಧ್ಯಮ (ಸುದ್ದಿಪತ್ರಿಕೆಗಳು, ನಿಯತಕಾಲಿಕಗಳು, ಟಿವಿ) | ಎಂಐಬಿ |
| ಮ್ಯೂಚ್ಯುವಲ್ ಫಂಡ್‌ಗಳು ಮತ್ತು ಅಸೆಟ್ ಮೆನೇಜ್‌ಮೆಂಟ್ ಕಂಪೆನಿಗಳು | ಸೆಬಿ |
| ಮ್ಯೂಚ್ಯುವಲ್ ಫಂಡ್ ಬ್ರೋಕರ್‌ಗಳು/ಏಜೆಂಟುಗಳು | ಎಎಂಎಫ್‌ಐ / ಸೆಬಿ |
| ನಾನ್ ಬ್ಯಾಂಕಿಂಗ್ ಫಿನಾನ್ಶಿಯಲ್ ಕಂಪೆನಿಗಳು(ಎನ್‌ಬಿಎಫ್‌ಸಿ) | ಆರ್‌ಬಿಐ |
| ನಿಧಿ ಕಂಪೆನಿಗಳು | ಎಂಸಿಎ |
| ತೋಟಗಾರಿಕಾ ಕಂಪೆನಿಗಳು | ಸೆಬಿ |
| ಪೋರ್ಟ್‌ಫೋಲಿಯೋ ಮೆನೇಜರ್ಸ್ | ಸೆಬಿ |
| ರೆಜಿಸ್ಟ್ರಾರ್ಸ್ ಮತ್ತು ಷೇರ್ ಟ್ರಾನ್ಸ್‌ಫರ್ ಏಜೆಂಟುಗಳು | ಸೆಬಿ |
| ಸ್ಟೋಕ್ ಬ್ರೋಕರ್‌ಗಳು | ಸೆಬಿ / ಎಸ್‌ಇ |
| ಸ್ಟೋಕ್ ಎಕ್ಸ್‌ಚೇಂಜ್‌ಗಳು | ಸೆಬಿ |
| ಸಬ್ ಬ್ರೋಕರ್‌ಗಳು | ಸೆಬಿ |
| ವೆಂಚುರ್ ಕೇಪಿಟಲ್ ಫಂಡ್‌ಗಳು | ಸೆಬಿ |

# ಸ್ವೀಕೃತಿ & ಘೋಷಣೆ

**ಸ್ವೀಕೃತಿ**

ಈ ಕಿರು ಪುಸ್ತಕದಲ್ಲಿ ನೀಡಲಾದ ವಿಚಾರಗಳನ್ನು ಕಾರ್ಪರೇಟ್ ವ್ಯವಹಾರ ಸಚಿವಾಲಯದ ವೆಬ್‌ಸೈಟ್(ಡಬ್ಲ್ಯೂಡಬ್ಲ್ಯೂಡಬ್ಲ್ಯೂ.ಎಂಸಿಎ.ಜಿಒವಿ.ಐಎನ್), ಹೂಡಿಕೆದಾರರ ಜಾಗೃತಿ ಮತ್ತು ಸುರಕ್ಷಾ ನಿಧಿ(ಡಬ್ಲ್ಯೂಡಬ್ಲ್ಯೂಡಬ್ಲ್ಯೂ.ಐಎಪಿಎಫ್.ಜಿಒವಿ.ಐಎನ್), ಸೆಬಿ(ಡಬ್ಲ್ಯೂಡಬ್ಲ್ಯೂಡಬ್ಲ್ಯೂ.ಎಸ್ಇಬಿಐ.ಜಿಒವಿ.ಐಎನ್), ಎನ್ಎಸ್ಇ (ಡಬ್ಲ್ಯೂಡಬ್ಲ್ಯೂಡಬ್ಲ್ಯೂ.ಎನ್ಎಸ್ಇಇಂಡಿಯಾ.ಕಾಂ) ಬಿಎಸ್ಇ(ಡಬ್ಲ್ಯೂಡಬ್ಲ್ಯೂಡಬ್ಲ್ಯೂ.ಬಿಎಸ್ಇಇಂಡಿಯಾ.ಕಾಂ), ಎಂಸಿಎಕ್ಸ್–ಎಸ್ಎಕ್ಸ್(ಡಬ್ಲ್ಯೂಡಬ್ಲ್ಯೂಡಬ್ಲ್ಯೂ. ಎಂಸಿಎಕ್ಸ್–ಎಸ್ಎಕ್ಸ್.ಕಾಂ). ಪ್ರೈಮ್ ಡಾಟಾಬೇಸ್(ಡಬ್ಲ್ಯೂಡಬ್ಲ್ಯೂಡಬ್ಲ್ಯೂ.ಪ್ರೈಂಡಾಟಾಬೇಸ್.ಕಾಂ) ಹಾಗೂ ಐಸಿಎಐ, ಐಸಿಎಸ್ಐ, ಐಸಿಡಬ್ಲ್ಯೂಎಐಯ ಪ್ರಕಟಣೆಗಳಿಂದ ಮಾಹಿತಿ ಪಡಕೊಂಡು ತಯಾರಿ/ಸಂಗ್ರಹ/ಪರಿವರ್ತಿಸಲಾಗಿದೆ.

**ಘೋಷಣೆ**

ಹೂಡಿಕೆದಾರರದಲ್ಲಿ ವಿವಿಧ ಕೇಪಿಟಲ್ ಮಾರ್ಕೆಟ್ ಬಗ್ಗೆ ಜಾಗೃತಿ ಮೂಡಿಸಲು ಮತ್ತು ಮಾಹಿತಿ ನೀಡಲು ಇದರಲ್ಲಿ ವಿಚಾರಗಳನ್ನು ನೀಡಲಾಗಿದೆ. ಎಲ್ಲಾ ವಿಧದಲ್ಲಿ ಸೂಕ್ಷ್ಮತೆ ವಹಿಸಿ ಈ ಮಾಹಿತಿ ನೀಡಲಾಗಿದೆ. ಇದನ್ನು ಓದಿ ಅನುಸರಿಸಿ ಕೈಗೊಂಡ ಕಾರ್ಯದಲ್ಲಿ ಏನಾದರೂ ಲೋಪದೋಷಗಳು ಸಂಭವಿಸಿದರೆ ಕಾರ್ಪರೇಟ್ ವ್ಯವಹಾರ ಸಚಿವಾಲಯ, ಸಂಪಾದಕರು, ಇದನ್ನು ವಿತರಿಸುವ ಸಂಸ್ಥೆ ಹೊಣೆಗಾರರಲ್ಲ.

ಕೇಪಿಟಲ್ ಮಾರ್ಕೆಟ್‌ಗೆ ಸಂಬಂಧಿಸಿದ ಕಾಯಿದೆ ಕಾನೂನುಗಳು ಆಗಾಗ ಬದಲಾಗುತ್ತಲೇ ಇದೆ. ಹೂಡಿಕೆದಾರರು ಇದನ್ನು ಮನಗಂಡು ಬದಲಾವಣೆ ತಿಳಿದುಕೊಂಡು ವ್ಯವಹಾರ ಮಾಡಬೇಕಾಗಿ ಅಪೇಕ್ಷೆ. ವೆಬ್‌ಸೈಟ್‌ನಲ್ಲಿ ಬರುವ ಹೊಸ ಸುದ್ದಿಗಳನ್ನು ತಿಳಿದುಕೊಳ್ಳಬೇಕು ಅಗತ್ಯ ವಿದ್ದರೆ ಸಂಬಂಧಪಟ್ಟ ನಿಯಂತ್ರಕರನ್ನು ಸಂಪರ್ಕಿಸಬೇಕು.